# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 • ಸಂಚಿಕೆ:319 • ನೋಂದಣಿ ನಂ.:KARKAN27911 • ವಿಜಯನಗರ • 21.05.2024 • ಮಂಗಳವಾರ • ಪುಟ:04 • ಬೆಲೆ:2
Volume:01 • Issue:319 • Reg.No:KARKAN27911 • VIJAYANAGARA • 21.05.2024 • Tuesday • Page:04 • Rs:2


# ವ್ಯಾಕರಣ ದೋಷಗಳಾದ್ರೆ ಅರ್ಥ ವ್ಯತ್ಯಾಸ ಅಕ್ಷರ ದೋಷಗಳು ಘನತೆಗೆ ಚ್ಯುತಿ

## ಕನ್ನಡ ವಿವಿ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅಭಿಮತ | ಕರಡು ತಿದ್ದುಪಡಿ ಮತ್ತು ಪುಟವಿನ್ಯಾಸ ಕಾರ್ಯಾಗಾರ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಂಶೋಧನೆಯ ವಿದ್ವತ್ ಲೋಕದಲ್ಲಿ ಹೊಸ ವಿಷಯಗಳ ಚಿಂತನೆಯಷ್ಟೇ, ಬರವಣಿಗೆ ಮತ್ತು ಅದರ ಪರಿಷ್ಕರಣೆಯೂ ತುಂಬಾ ಮುಖ್ಯವಾಗಿದ್ದು, ಸಂಶೋಧನೆಯಲ್ಲಿ ಕರಡುತಿದ್ದುಪಡಿಯೂ ಪ್ರಮುಖ ವಾದ ಘಟ್ಟವಾಗಿದೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಅವರು ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಸೋಮವಾರ ರಾಮಮನೋಹರ ಲೋಹಿಯಾ ಅಧ್ಯಯನ ಪೀಠ ಮತ್ತು ಪ್ರಸಾರಾಂಗದ ಸಹಯೋಗದಲ್ಲಿ ಆಯೋಜಿಸಿದ್ದ ಐದು ದಿನಗಳ (20 ರಿಂದ 24 ಮೇ 2024ರವರೆಗೆ)ವರೆಗೆ ಕರಡು ತಿದ್ದುಪಡಿ ಮತ್ತು ಪುಟವಿನ್ಯಾಸ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಸಂಶೋಧನಾ ಬರವಣಿಗೆಯಲ್ಲಿ ವ್ಯಾಕರಣ ದೋಷಗಳಾದಾಗ, ವಿಷಯದ ಅರ್ಥವ್ಯತ್ಯಾಸವಾಗುವುದು. ಇದರಿಂದ ಪರಿಣಾಮಕಾರಿ ಸಂವಹನ ಸಾಧ್ಯವಾಗುವುದಿಲ್ಲ. ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಮಹಾಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದಾಗ ಹೆಚ್ಚಿನ ಮೌಲ್ಯಮಾಪಕರು ಈ ಮಹಾಪ್ರಬಂಧದಲ್ಲಿ ಅಕ್ಷರ ದೋಷಗಳಿವೆ ಎಂದು ವರದಿ ಬರೆಯುತ್ತಾರೆ. ಇತರೆ ವಿಶ್ವವಿದ್ಯಾಲಯಗಳ ಸಂಶೋಧನಾ ಪ್ರಬಂಧಗಳಲ್ಲಿ ತಪ್ಪುಗಳಾದರೆ ಹೋಗಲಿ ಎಂದು ಹೇಳಬಹುದು. ಕನ್ನಡ ಭಾಷೆ, ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಕನ್ನಡ ವಿಶ್ವವಿದ್ಯಾಲಯದ ಸಂಶೋಧನೆಗಳಲ್ಲಿ ಅಕ್ಷರ ದೋಷಗಳು, ವಾಕ್ಯದೋಷಗಳಾದರೆ ಅದರಿಂದ ವಿಶ್ವವಿದ್ಯಾಲಯದ ಘನತೆಗೆ ಚ್ಯುತಿ ಬರುತ್ತದೆ. ಇನ್ನು ಮುಂದಿನ ದಿನಗಳಲ್ಲಿ ಸಂಶೋಧನಾರ್ಥಿಗಳು ತಮ್ಮ ಮಹಾ ಪ್ರಬಂಧವನ್ನು ತಾವೇ ಕರಡು ತಿದ್ದುಪಡಿ ಮಾಡಿ, ಪುಟವಿನ್ಯಾಸ ಮಾಡಲು ಈ ಕಾರ್ಯಾಗಾರವು ಸಹಕಾರಿಯಾಗಲಿದೆ. ಇದರ ಪೂರ್ಣ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆಯಬೇಕೆಂದು ಕಿವಿಮಾತು ಹೇಳಿದರು.

ಪ್ರಸಾರಾಂಗದ ನಿರ್ದೇಶಕರಾದ ಡಾ.ಮಾಧವ ಪೆರಾಜೆ ಮಾತನಾಡಿ, ಸಂಶೋಧನಾರ್ಥಿಗಳು ತಮ್ಮ ಸಂಶೋಧನೆಯ ಮಹಾಪ್ರಬಂಧವನ್ನು ಕರಡು ತಿದ್ದುಪಡಿ ಮಾಡಲು ಇತರರಿಗೆ ಹಣಕೊಟ್ಟು ಮಾಡಿಸುವುದರ ಬದಲು ತಾವೇ ಮಾಡುವುದು ಒಳ್ಳೆಯದು. ಇದರಿಂದ ಸಂಶೋಧನ ಪ್ರಬಂಧಗಳ ಗುಣಮಟ್ಟವನ್ನು ಕಾಪಾಡಬಹುದು ಎಂದು ತಿಳಿಸಿದರು.

ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ಸಂಚಾಲಕರಾದ ಡಾ.ಯರ್ರಿಸ್ವಾಮಿ ಅವರು ಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಶೋಧನಾ ವಿದ್ಯಾರ್ಥಿ ಮೋಹನ್‌ಕುಮಾರ್ ನಿರೂಪಿಸಿದರು. ವಿರುಪಾಕ್ಷ ಕೆ. ವಂದಿಸಿದರು. ಈ ಸಂದರ್ಭದಲ್ಲಿ ಪ್ರಾಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಬಿಜೆಪಿಯ ಅಪಪ್ರಚಾರದ ನಡುವೆಯೂ ಗ್ಯಾರಂಟಿಗಳು ಜನರ ಮನೆ ಮನೆ ತಲುಪಿವೆ : ಸಿಎಂ** ವಿವರ ಪುಟ 2

**ಇನ್ನಷ್ಟು ಬೇಕಾಗಿವೆ.... ಸಾಮಾಜಿಕ ನೀತಿ ಸಂಹಿತೆಗಳು** ಪುಟ 3







ಹಂಪಿ ಟೈಮ್ಸ್ HAMPI TIMES

## ಬೆಳಕಿನ ಹಾದಿ

# ಬದಲಾದ ಕಲಿಕೆ



ಇದು ಬಹಳ ಹಿಂದಿನ ಕಥೆ. ಟೋಪಿ ಮಾರುವವನು ಮತ್ತು ಕೋತಿಯ ಕಥೆಯನ್ನು ಎಲ್ಲರೂ ಕೇಳಿಯೇ ಇರುತ್ತೇವೆ. ಬೇಸಿಗೆಯ ದಿನಗಳಲ್ಲಿ ಹಳ್ಳಿಯಿಂದ ಹಳ್ಳಿಗೆ ಕಾಲ್ನಡಿಗೆಯಲ್ಲಿ ಟೋಪಿ ಮಾರಲು ಹೋದ ವ್ಯಕ್ತಿ ಮರದ ಕೆಳಗೆ ಮಲಗುತ್ತಾನೆ. ದಣಿದಿದ್ದರಿಂದ ನಿದ್ರೆಗೆ ಜಾರುತ್ತಾನೆ. ಆಗ ಮರದ ಮೇಲಿದ್ದ ಕೋತಿಗಳೆಲ್ಲ ಕೆಳಗೆ ಬಂದು ಅವನ ಗಂಟಿನಲ್ಲಿದ್ದ ಟೋಪಿಗಳನ್ನೆಲ್ಲಾ ತೆಗೆದುಕೊಂಡು ಹೋಗಿರುತ್ತವೆ. ಎಚ್ಚರವಾದ ನಂತರ ನೋಡಿದರೆ ಗಂಟು ಖಾಲಿಯಾಗಿರುತ್ತದೆ. ಗಾಬರಿಗೊಂಡ ಟೋಪಿ ಮಾರುವವನು ತಲೆ ಎತ್ತಿ ನೋಡುತ್ತಾನೆ. ಮರದ ಮೇಲಿನ ಕೋತಿಗಳೆಲ್ಲ ಟೋಪಿ ಧರಿಸಿ ಆಟವಾಡುತ್ತಿದ್ದವು. ಅವುಗಳನ್ನು ಬೇಡಿಕೊಂಡರೂ ಟೋಪಿ ಕೊಡಲಿಲ್ಲ. ಕೊನೆಗೆ ಬೇಸರಗೊಂಡು ತನ್ನ ತಲೆಯ ಮೇಲಿದ್ದ ಟೋಪಿಯನ್ನು ನೆಲಕ್ಕೆ ಬಿಸಾಕುತ್ತಾನೆ. ಕೂಡಲೇ ಎಲ್ಲಾ ಕೋತಿಗಳು ಟೋಪಿಯನ್ನು ನೆಲಕ್ಕೆ ಬಿಸಾಕುತ್ತವೆ. ಅವುಗಳನ್ನೆಲ್ಲ ಆರಿಸಿ ಗಂಟು ಕಟ್ಟಿಕೊಂಡು ಊರಿಗೆ ಮರಳುತ್ತಾನೆ. ಈ ಕಥೆಯು ತಲಾತಲಾಂತರದಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಿದು ಬಂದಿದೆ.



ಈಗ ಅದೇ ಟೋಪಿ ಮಾರುವವನ ಮೊಮ್ಮಗನೂ ಸಹ ಟೋಪಿ ಮಾರುತ್ತಿದ್ದ. ಆದರೆ ಅವನು ಕಾಲ್ನಡಿಗೆಯ ಬದಲು ಸ್ಕೂಟರ್‌ನಲ್ಲಿ ಊರಿಂದ ಊರಿಗೆ ತೆರಳಿ ಮಾರಾಟ ಮಾಡುತ್ತಿದ್ದ. ಬೇಸಿಗೆಯ ಒಂದು ದಿನ ದಣಿವಾರಿಸಿಕೊಳ್ಳಲು ಮರದ ನೆರಳಿನಲ್ಲಿ ಮಲಗಿದ್ದ. ಆ ಮರದ ಮರದ ಮೇಲೆ ಕೋತಿಗಳು ಇದ್ದವು. ಅವನು ಮಲಗಿದ ನಂತರ ಕೆಳಗಿಳಿದ ಕೋತಿಗಳು ಅವನ ಗಂಟು ಹುಟುಕಾಡಿದವು. ಆದರೆ ಗಂಟು ಇರಲಿಲ್ಲ. ಬದಲಾಗಿ ಬ್ಯಾಗ್ ಇತ್ತು. ಅದಕ್ಕೆ ಜಿಪ್ ಇದ್ದು, ಬೀಗ ಹಾಕಲಾಗಿತ್ತು. ಅವನ ಜೇಬಿನಲ್ಲಿದ್ದ ಬೀಗದ ಕೈಯನ್ನು ಹೊರತೆಗೆದ ಕೋತಿಗಳು, ಅದರಿಂದ ಬ್ಯಾಗನ್ನು ಓಪನ್ ಮಾಡಿದವು. ಒಳಗೆ ಟೋಪಿ ಇದ್ದವು. ಅವುಗಳನ್ನೆಲ್ಲಾ ತೆಗೆದುಕೊಂಡು ಮರ ಏರಿದವು. ತಲೆ ಹಾಕಿಕೊಂಡವು. ಹಿಡಿದು ಜಗ್ಗಾಡಿದವು. ಸ್ವಲ್ಪ ಸಮಯದ ನಂತರ ನಿದ್ದಯಿಂದ ಎಚ್ಚರಗೊಂಡ ಟೋಪಿ ಮಾರುವವ, ಬ್ಯಾಗನ್ನು ನೋಡಿದ. ಬ್ಯಾಗ್ ತೆರೆದಿತ್ತು. ಒಳಗಿನ ಟೋಪಿಗಳೆಲ್ಲ ಖಾಲಿಯಾಗಿದ್ದವು. ಕೂಡಲೇ ಅವನಿಗೆ ತಾತ ಹೇಳುತ್ತಿದ್ದ ಕೋತಿಗಳ ಕಥೆ ನೆನಪಾಯಿತು. ಮರದ ಕಡೆಗೆ ನೋಡಿದ. ಎಲ್ಲಾ ಕೋತಿಗಳ ಕೈಯಲ್ಲಿ ಟೋಪಿಗಳಿದ್ದವು. ತನ್ನ ತಾತ ಮಾಡಿದಂತೆ ಟೋಪಿ ನೆಲಕ್ಕೆ ಹಾಕಲು ಅವನ ತಲೆಯ ಮೇಲೆ ಇರಲಿಲ್ಲ. ಏಕೆಂದರೆ ಅವನು ಟೋಪಿ ಧರಿಸುತ್ತಿರಲಿಲ್ಲ. ಪ್ಯಾಂಟಿನ ಜೇಬಿನಲ್ಲಿದ್ದ ಕರ್ಚೀಫ್ ತೆಗೆದು ಅದನ್ನೆ ಟೋಪಿ ರೀತಿಯಲ್ಲಿ ತಲೆಗೆ ಹಾಕಿಕೊಂಡ. ನಂತರ ಅದನ್ನು ತೆಗೆದು ನೆಲಕ್ಕೆ ಬಿಸಾಕಿದ. ಆದರೆ ಒಂದೂ ಕೋತಿಯು ಟೋಪಿಯನ್ನು ನೆಲಕ್ಕೆ ಹಾಕಲಿಲ್ಲ. ಎಷ್ಟೇ ಬೇಡಿಕೊಂಡರೂ ಟೋಪಿ ಸಿಗಲಿಲ್ಲ. ಕೋತಿಗಳೂ ಸಹ ತಮ್ಮ ತಾತಂದಿರಿಂದ ಕೇಳಿದ ಕಥೆಯಿಂದ ಪಾಠ ಕಲಿತಿದ್ದವು. ಟೋಪಿ ಸಿಗದೇ ಖಾಲಿ ಬ್ಯಾಗ್ ತೆಗೆದುಕೊಂಡು ಮನೆ ಕಡೆ ಹೊರಟ.

ಕಾಲಕ್ಕನುಗುಣವಾಗಿ ಪ್ರತಿ ಮಾನವನ ವರ್ತನೆ, ನಡೆ-ನುಡಿಗಳಲ್ಲಿ ಬದಲಾಗುತ್ತಿರುವಂತೆ ಪ್ರಾಣಿಗಳಲ್ಲೂ ಬದಲಾವಣೆಗಳು ಆಗುತ್ತಿವೆ. ಅಲ್ಲದೇ ಮಾನವನ ಪ್ರತಿ ಸಮುದಾಯಗಳಲ್ಲೂ ಸಹ ಬದಲಾವಣೆಗಳು ಆಗುತ್ತಿವೆ. ಪ್ರತಿ ಸಮುದಾಯವೂ ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಮುಂದೆ ಬರುತ್ತಿರುವುದು ಸಂತಸದ ಸಂಗತಿಯಾಗಿದೆ. ಶಿಕ್ಷಣದಿಂದ ಮಾತ್ರವೇ ಕಾಲಕ್ಕನುಗುಣವಾದ ಕಲಿಕೆಯನ್ನೂ ಮೂಡಿಸಿಕೊಳ್ಳಲು ಸಾಧ್ಯ.

# ಮಲೆನಾಡ ಅಂತರಾಷ್ಟ್ರೀಯ ಚೆಸ್ ಚತುರ ಕಿಶನ್

ಹುಟ್ಟುತ್ತಲೇ ತನ್ನ ಎರಡು ಕಣ್ಣುಗಳನ್ನು ಶೇಕಡ 75 ಭಾಗ ಅಂಧತ್ವವನ್ನು ಹೊಂದಿದ್ದರು ಸಹ ಛಲ ಬಿಡದೆ ದೇಶದ ಕೀರ್ತಿಯನ್ನು ವಿಶ್ವದಗಲಕ್ಕೆ ಸಾರಿದ ಚದುರಂಗ ಆಟಗಾರ ಶಿವಮೊಗ್ಗದ ಕಿಶನ್.

ಬ್ಯೂಟಿ ಪಾರ್ಲರನ್ನು ನಡೆಸಿ ಈ ಮಟ್ಟಕ್ಕೆ ಬೆಳೆಯಲು ಸಾಕಷ್ಟು ತ್ಯಾಗವನ್ನ ಮಾಡಿದ್ದಾರೆ ತಾಯಿ ಗೀತಾ ಗಂಗೊಳ್ಳಿ,ಕಣ್ಣುಗಳ ನರದ ತೊಂದರೆಯಿಂದಾಗಿ ಅಂಧತ್ವವನ್ನು ಪಡೆದುಕೊಂಡ ಕಿಶನ್ ಕ್ರೀಡೆಯಲ್ಲಿ ಅಂಧನಾಗಲಿಲ್ಲ ಮಾವ ಸಂತೋಷ್ ನೆರವಿನಿಂದ ನಳಂದ ಚೆಸ್ ಅಕಾಡೆಮಿಯನ್ನು ಸೇರಿ ಶ್ರೀ ಕೃಷ್ಣ ಉಡುಪ ಇವರು ಕೂಡ ಅಂಧತ್ವವನ್ನು ಹೊಂದಿದ ತರಬೇತುದಾರರಾದ ಪರಿಣಾಮ ಉತ್ತಮ ಮಾರ್ಗದರ್ಶನ ಪಡೆಯಲು ಕಿಶನ್ ರವರಿಗೆ ನೆರವಾಯಿತು.

ತಮ್ಮೆಲ್ಲ ವಿದ್ಯಾಭ್ಯಾಸವನ್ನು ಶಿವಮೊಗ್ಗದಲ್ಲಿ ಪೂರ್ಣಗೊಳಿಸಿದ್ದಾರೆ ಇವರುಅರ್ಥಶಾಸ್ತ್ರದಲ್ಲಿದ್ವಿತೀಯರ್ಯಾಂಕ್‌ಪಡೆಯುವುದರೊಂದಿಗೆ ಕುವೆಂಪು ವಿಶ್ವವಿದ್ಯಾನಿಲಯದಿಂದ ಎಂ,ಎ.ಪದವಿಯನ್ನು ಗಳಿಸಿರುತ್ತಾರೆ.

6ನೇ ತರಗತಿಯಿಂದ 9ನೇ ತರಗತಿವರೆಗೆ ಚೆಸ್ ತರಬೇತಿಯನ್ನು ಪಡೆದುಕೊಂಡ ಇವರು 10ನೇ ತರಗತಿಗೆ ಬರುವಾಗ ತರಬೇತಿಯನ್ನು ಮೊಟುಕುಗೊಳಿಸಿ ಮುಂದೆ ಪದವಿ ಪೂರ್ವ ಶಿಕ್ಷಣ ಸಂದರ್ಭದಲ್ಲಿ ಚೆಸ್ ಕ್ರೀಡೆಯನ್ನು ವೃತ್ತಿಪರ ಕ್ರೀಡೆಯಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ.

ಅದೆಷ್ಟೋ ಕ್ರೀಡಾಕೂಟಗಳಿಗೆ ಜೊತೆಯಾಗಿ ಕರೆದುಕೊಂಡು ಹೋಗಿ ಮಾರ್ಗದರ್ಶನ ಮಾಡುತ್ತಿದ್ದ ಆರ್ಬಿಟರ್ ಮಂಜುನಾಥ್ ಶಿವಮೊಗ್ಗ ಇವರಿಂದ ಕ್ರೀಡಾಜರ್ನಿ ಪ್ರಾರಂಭಿಸಿದ್ದಾರೆ.

2011ರಲ್ಲಿ ಪ್ರಥಮ ಬಾರಿಗೆ ಅಂತರರಾಷ್ಟ್ರೀಯ ಜೂನಿಯರ್ ಚೆಸ್ ಪಂದ್ಯಾವಳಿಗೆ ಗ್ರೀಸ್ಗೆ ಪ್ರಯಾಣವನ್ನು ಬೆಳೆಸಿದೆ ಆ ಸಂದರ್ಭದಲ್ಲಿ ನನಗೆ ಸಾಕಷ್ಟು ಭಯ ಮತ್ತು ಕಷ್ಟವಾಯಿತು ಕಾರಣ ಭಾಷೆ ಸರಿಯಾಗಿ ತಿಳಿಯುತ್ತಿರಲಿಲ್ಲ ತಾಯಿಯನ್ನು ಬಿಟ್ಟು ನಾನೆಂದು ದೂರದ ಪ್ರಯಾಣವನ್ನು ಮಾಡಿರಲಿಲ್ಲ ಆದರೂ ಸಹ ದೇಶಕ್ಕಾಗಿ ಏನಾದರು ಸಾಧನೆ ಮಾಡಬೇಕೆಂಬ ಛಲ ನನ್ನನ್ನು 6ನೇ ಸ್ಥಾನ ಗಳಿಸುವಂತೆ ಮಾಡಿತು ಅಲ್ಲಿಂದ ಪಣತೊಟ್ಟು ದೇಶಕ್ಕಾಗಿ ಆಡಲು ಆರಂಭಿಸಿದೆ ಎನ್ನುತ್ತಾರೆ ಕಿಶನ್.

ಮಾವ ನನ್ನನ್ನು ಅಂದು ಕರದೊಯ್ಯದೆ ಇದ್ದಿದ್ದರೆ ನಾನಿಂದು ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ ತಾಯಿ ಸದಾಕಾಲ ಬೆನ್ನೆಲುಬಾಗಿ ನಿಂತು ಸಹಕಾರ ನೀಡಿದ್ದಾರೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಶಿವಮೊಗ್ಗದ ನಳಂದ ಚೆಸ್ ಅಕಾಡೆಮಿಯ ತರಬೇತುದಾರರು ಸರ್ವ ಸದಸ್ಯರು ಸಾಕಷ್ಟು ನೆರವನ್ನು ನೀಡಿದ್ದಾರೆ.

ಎ,ಐ,ಸಿ,ಎಫ್,ಬಿ ಇದರ ಸಹಕಾರ ಹಾಗೂ ಡಿ,ವಿ, ಎಸ್.ಕಾಲೇಜಿನ ಆಡಳಿತ ಮಂಡಳಿ ಮತ್ತು ಬೋಧಕ, ಬೋಧಕೇತರ ವರ್ಗದವರ ಸಹಾಯ ಜೊತೆಗೆ ಸ್ನೇಹಿತ ಗ್ರಾಂಡ್ ಮಾಸ್ಟರ್ ಸ್ಟ್ಯಾನಿ ಇವರು ಚೆಸ್ ಪುಸ್ತಕಗಳನ್ನು ಓದಿ ನಿಯಮಗಳನ್ನು ತಿಳಿಸುತ್ತಿದ್ದರು ಹಾಗೂ ಇವರ ಮನೆಯಲ್ಲಿಯೇ ಪ್ರಾಕ್ಟೀಸ್ ಮಾಡಲು ನನಗೆ ಅವಕಾಶ ಕಲ್ಪಿಸಿದ್ದರು.

ಸಾಗರ್ ಷಾ ಇವರು ಸಾಕಷ್ಟು ಸಹಕಾರವನ್ನು ನೀಡಿದ್ದಾರೆ ಯಾವುದೇ ಹಣ ಪಡೆಯದೆ ತರಬೇತಿಯನ್ನು ನೀಡುವುದಲ್ಲದೆ ಇವರ ಯೂಟ್ಯೂಬ್ ಚಾನಲ್ ನಲ್ಲಿ ನನ್ನ ಆಟವನ್ನು ಬಿತ್ತರಿಸಿ ಮುನ್ನೆಲೆಗೆ ತಂದಿದ್ದಾರೆ ಇದರೊಂದಿಗೆ ನ್ಯಾಷನಲ್ ಫೆಡರೇಶನ್ ಕೂಡ ಸಹಕಾರವನ್ನು ನೀಡಿದೆ ಇವರೆಲ್ಲ ಸಹಕಾರಕ್ಕೆ ನಾನು ಚಿರಋಣಿ ಎನ್ನುತ್ತಾರೆ ಕಿಶನ್.



ವಿಶೇಷವಾಗಿ ಏಬಲ್ ಮತ್ತು ಅನೇಬಲ್ 02 ವಿಭಾಗಗಳಲ್ಲಿ ಆಟವನ್ನು ಪ್ರದರ್ಶಿಸುವ ಅವಕಾಶವಿರುತ್ತದೆ ನಿಯಮಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಆದರೆ,ಪ್ರತಿ ಮೂವ್ ಗಳನ್ನು ಬಾಯಿಯಲ್ಲಿ ಹೇಳಬೇಕಾಗುತ್ತದೆ.

ಸರ್ಕಾರದಿಂದ ಈ ಹಿಂದೆ ಸರಿಯಾದ ಸಹಕಾರ ದೊರೆಯದೆ 2018ರ ನಂತರ ಕ್ರೀಡೆಯಿಂದ ಹೊರಗೂಳಿಯಲು ತೀರ್ಮಾನಿಸಿದ್ದೆ ಆದರೆ ಹಿತೈಷಿಗಳು ನಿರ್ಧಾರವನ್ನು ಬದಲಿಸಲು ತಿಳಿಸಿದ ಪರಿಣಾಮ ಕ್ರೀಡೆಯಲ್ಲಿ ಮುಂದುವರೆದಿದ್ದೇನೆ.

ಎಲ್ಲಾ ಕ್ರೀಡೆಗಳಂತೆ ಚೆಸ್ ಕ್ರೀಡೆಗೂ ಸರ್ಕಾರ ಪ್ರಾಮಾಣಿಕೃತ ಕ್ರೀಡೆಯಾಗಿ ಅವಕಾಶ,ನಗದು ಬಹುಮಾನ ಹಾಗೂ ಪ್ರಶಸ್ತಿ ಪುರಸ್ಕಾರಗಳನ್ನು ನೀಡಬೇಕು.

ಚೆಸ್ ಕ್ರೀಡಾಪಟುಗಳಿಗೂ ಸರ್ಕಾರಿ ಉದ್ಯೋಗವನ್ನು ನೀಡಬೇಕು ಈಗಾಗಲೇ ಒರಿಸ್ಸಾ ಮತ್ತಿತರೆ ರಾಜ್ಯಗಳಲ್ಲಿ ಸರ್ಕಾರಿ ಉದ್ಯೋಗವನ್ನು ಚೆಸ್ ಕ್ರೀಡಾಪಟುಗಳಿಗೆ ನೀಡುತ್ತಿದ್ದಾರೆ.

ನಮಗೂ ಕುಟುಂಬ ನಿರ್ವಹಣೆಯ ಒತ್ತಡವಿದ್ದು ಇದರಿಂದ ಕ್ರೀಡೆಯಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುವುದಿಲ್ಲ ಆರ್ಥಿಕವಾಗಿ ಸಬಲರಾದರೆ ಒತ್ತಡಗಳನ್ನು ಮರೆತು ಸಾಧನೆಯತ್ತ ಒತ್ತು ನೀಡಬಹುದು.

ಇತ್ತೀಚಿನ ದಿನಗಳಲ್ಲಿ ಒಂದಷ್ಟು ಪ್ರಯಾಣ ವೆಚ್ಚವನ್ನು ಸರ್ಕಾರ ಬರಿಸುತ್ತಿದೆ ಇದು ಸ್ವಾಗತಾರ್ಹ ಎಂದೇಳುತ್ತಾರೆ ಕಿಶನ್.

ಯಾವುದೇ ಕ್ರೀಡೆಯಾದರೂ ಪಾಲ್ಗೊಂಡ ಕಡಿಮೆ ಅವಧಿಯಲ್ಲಿ ಯಶಸ್ಸು ಸಿಗಲಾರದು ಅದಕ್ಕಾಗಿ ಬಹು ದಿನಗಳ ಕಾಲ ಶ್ರಮಿಸಬೇಕಾಗುತ್ತದೆ ಯುವಕರು ಅದನ್ನು ಅರ್ಥ ಮಾಡಿಕೊಂಡು,ಸೋಲಿನಿಂದ ಪಾಠ ಕಲಿತು ತಾಳ್ಮೆಯಿಂದ ಕ್ರೀಡೆಯಲ್ಲಿ ಮುಂದುವರೆದರೆ ಯಶಸ್ಸು ಸಿದ್ದ ಎಂದು ಯುವಕರಿಗೆ ಕರೆ ನೀಡುತ್ತಾರೆ.

ನಾನು ಓದುವ ಸಂದರ್ಭದಲ್ಲಿ ಶಾಲೆ, ಕಾಲೇಜುಗಳಲ್ಲಿ ನನಗೆ ಪೂರ್ಣ ಪ್ರಮಾಣದ ಹಾಜರಾತಿಯನ್ನು ಕೊಟ್ಟು ವಿಶೇಷ ತರಗತಿಗಳನ್ನು ಆಯೋಜಿಸಿ ಸಹಕರಿಸಿದ್ದಾರೆ ಹಾಗೂ ಹಲವಾರು ಸಹಾಯಕರು ಪರೀಕ್ಷೆಯನ್ನು ಬರೆದು ಸಹಕರಿಸಿದ್ದಾರೆ ಅವರೆಲ್ಲರಿಗೂ ಕೃತಜ್ಞತೆಗಳು ಅರ್ಪಿಸುತ್ತಾರೆ ಕಿಶನ್.

ಒಬ್ಬ ಆಟಗಾರನಾಗಿ ವಿಶ್ವ ಚಾಂಪಿಯನ್ ಪ್ರಶಸ್ತಿ ಪಡೆದು ದೇಶದ ಕೀರ್ತಿಯನ್ನು ಎತ್ತಿ ಹಿಡಿಯಬೇಕೆಂದು ಗುರಿಯನ್ನು ಹೊಂದಿದ್ದೇನೆ ಎಲ್ಲರ ಸಹಕಾರ ದೊರೆತಿದ್ದೆ ಆದರೆ ಅದನ್ನು ಇಡೇರಿಸುತ್ತೇನೆ ಎಂದು ಹೇಳುತ್ತಾರೆ.

ನನಗಾದ ತೊಂದರೆ ಮುಂಬರುವ ಯುವ ಚೆಸ್ ಕ್ರೀಡಾಪಟುಗಳಿಗೆ ಆಗಬಾರದೆಂಬ ದೃಷ್ಟಿಯಿಂದ 2021 ರಿಂದ ನ್ಯಾಷನಲ್ ಫೆಡರೇಶನ್ ನ ಉಪಾಧ್ಯಕ್ಷರಾಗಿ ಕರ್ನಾಟಕದಲ್ಲಿ ಈವರೆಗೆ 03 ರಾಷ್ಟ್ರೀಯ,01 ಸೌತ್ ಜೋನ್,04 ರಾಜ್ಯ ಚಾಂಪಿಯನ್ಶಿಪ್ ಹಾಗೂ 10 ಓಪನ್ ಚೆಸ್ ಟೂರ್ನಮೆಂಟ್ಗಳನ್ನು ಹಲವಾರು ಸಂಘ ಸಂಸ್ಥೆಗಳ ಸಹಕಾರದಿಂದ ಆಯೋಜಿಸಿದ್ದೇವೆ ಇದರ ಉದ್ದೇಶ ಆಟಗಾರರಿಗೆ ವೇದಿಕೆ ನಿರ್ಮಾಣವಾಗಬೇಕು ಹೆಚ್ಚೆಚ್ಚು ಪಂದ್ಯಾವಳಿಗಳು ನಡೆದಾಗ ಭಾಗವಹಿಸಿ ಕಲಿಯುವುದು ಬಹಳಷ್ಟಿದೆ.

ಇದೇ ವರ್ಷ ಅಂದರೆ 2024 ಸೆಪ್ಟಂಬರ್ 27 ರಿಂದ ಅಕ್ಟೋಬರ್ 07 ರವರೆಗೆ ವಿಶ್ವ ಜೂನಿಯರ್ ಚಾಂಪಿಯನ್ಶಿಪ್ ಹಾಗೂ ವರ್ಲ್ಡ್ ವಿಮೆನ್ ಚಾಂಪಿಯನ್ಶಿಪ್ ಬೆಂಗಳೂರಿನಲ್ಲಿ ಆಯೋಜಿಸುತ್ತಿದ್ದೇವೆ ಇದರ ಸದುಪಯೋಗವನ್ನು ಚೆಸ್ ಆಟಗಾರರು ಪಡೆದುಕೊಳ್ಳಬೇಕೆಂಬ ಮನವಿಯನ್ನು ಸಲ್ಲಿಸುತ್ತಾರೆ ಕಿಶನ್.

ಇಲ್ಲಿಯವರೆಗೂ ಅಂತರಾಷ್ಟ್ರೀಯ ಚೆಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಚಿನ್ನ – 3, ಬೆಳ್ಳಿ– 4, ಕಂಚು–3.

ರಾಷ್ಟ್ರೀಯ ಚೇಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಚಿನ್ನ – 14, ಬೆಳ್ಳಿ –11 ಪದಕಗಳನ್ನು ಪಡೆದಿರುತ್ತಾರೆ.

ಅಂಧರ ಚೆಸ್ ಟೂರ್ನಮೆಂಟ್ ಗಳು 60 ಒಟ್ಟಾರೆ, ಎಲ್ಲಾ ಕ್ರೀಡಾಕೂಟಗಳು ಸೇರಿ 300ಕ್ಕೂ ಅಧಿಕ ಪಂದ್ಯಾವಳಿಗಳಲ್ಲಿ ಭಾಗವಹಿಸಿರುತ್ತಾರೆ.

ಹಲವಾರು ಸಂಘ-ಸಂಸ್ಥೆಗಳು,ಸ್ಥಳಿಯ ಶಾಲಾ ಕಾಲೇಜುಗಳು ಮತ್ತು ಚೆಸ್ ಪಂದ್ಯಾವಳಿಗಳಲ್ಲಿ ಇವರನ್ನು ಅತಿಥಿಯಾಗಿ ಆಹ್ವಾನಿಸಿ ಗೌರವಿಸಿರುತ್ತಾರೆ ಕ್ರೀಡಾಪಟುವಾಗಿ ಹಾಗೂ ಕ್ರೀಡಾ ಆಯೋಜಕರಾಗಿ ನಿಮ್ಮೆಲ್ಲ ಕನಸುಗಳು ಸಾಕರಗೊಳ್ಳಲು ಎಲ್ಲರ ಸಹಕಾರ ದೊರೆಯಲಿ

### ಕ್ರೀಡಾ ಸಾಧನೆಗಳು

2022(ಚೈನಾ) ಏಷಿಯನ್ ಚೆಸ್ ಪ್ಯಾರಾ ಗೇಮ್ಸ್ ವೈಯಕ್ತಿಕ ವಿಭಾಗದಲ್ಲಿ ಕಂಚು,ತಂಡ ವಿಭಾಗದಲ್ಲಿ ಕಂಚು.

2018(ಇಂಡೋನೇಷಿಯಾ) ಏಷ್ಯನ್ ಪ್ಯಾರಾ ಚೆಸ್ ಚಾಂಪಿಯನ್ಶಿಪ್ ವೈಯಕ್ತಿಕ ವಿಭಾಗದಲ್ಲಿ ಚಿನ್ನ,ತಂಡ ವಿಭಾಗದಲ್ಲಿ ಬೆಳ್ಳಿ.

2012 (ಚೆನ್ನೈ)ಐ,ಬಿ,ಸಿ,ಎ. ಒಲಂಪಿಯಾಡ್ನಲ್ಲಿ ಚಿನ್ನ.

2017(ನಾರ್ತ್ ಮೆಸಡೇನಿಯ) ಒಲಂಪಿಯಾಡ್ನಲ್ಲಿ ಕಂಚು.

2017(ಮಣಿಪಾಲ್- ಭಾರತ) ಐ,ಬಿ,ಸಿ,ಎ. ಏಷಿಯನ್ ಚಾಂಪಿಯನ್ಶಿಪ್ ನಲ್ಲಿ ಚಿನ್ನ.

2023(ಸರ್ಬಿಯ) ಪೀಡೆ ಚೆಸ್ ಒಲಂಪಿಯಾಡ್ ಬೆಳ್ಳಿ.

2022(ನಾರ್ತ್ ಮೆಸಡೂನಿಯ) ಐ,ಬಿ,ಸಿ,ಎ.ವರ್ಲ್ಡ್ ಟೀಮ್ ಚಾಂಪಿಯನ್ಶಿಪ್ ನಲ್ಲಿ ಬೆಳ್ಳಿ.

08 ಬಾರಿ ರಾಷ್ಟ್ರೀಯ ವಿಜುವಲ್ ಚಾಲೆಂಜ್ಡ್ ಚೆಸ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿ ಚಿನ್ನದ ಪದಕವನ್ನು ಗಳಿಸಿರುತ್ತಾರೆ.

2013(ಭುವನೇಶ್ವರ) 2014,2016,2017,2018,2023 (ಮುಂಬೈ)2019(ನಾಗಪುರ) ಮತ್ತು 2023(ಬೆಂಗಳೂರು). 2014(ಗ್ರೀಸ್)ನಡೆದ ಐ,ಬಿ,ಸಿ,ಎ. ವರ್ಲ್ಡ್ ಚೆಸ್ ಚಾಂಪಿಯನ್ಶಿಪ್ ನಲ್ಲಿ ಭಾಗವಹಿಸಿ 15ನೇ ಸ್ಥಾನವನ್ನು ಪಡೆದಿರುತ್ತಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**- ಜಾಹೀರಾತು ವ್ಯವಸ್ಥಾಪಕರು.**

# ಬಿಜೆಪಿಯ ಅಪಪ್ರಚಾರದ ನಡುವೆಯೂ ಗ್ಯಾರಂಟಿಗಳು ಜನರ ಮನೆ ಮನೆ ತಲುಪಿವೆ : ಸಿಎಂ

## ಸರ್ಕಾರ ಒಂದು ವರ್ಷ ಪೂರೈಸಿದ ಸಂದರ್ಭಕ್ಕೆ ಮಾಧ್ಯಮ ಸಂವಾದ ಕಾರ್ಯಕ್ರಮ | ಅಭಿವೃದ್ಧಿಗೂ ಹಣ ಮೀಸಲಿಟ್ಟು ಖರ್ಚು

**ಬೆಂಗಳೂರು:** ಬಿಜೆಪಿಯ ನಿರಂತರ ಅಪಪ್ರಚಾರದ ನಡುವೆಯೂ ಗ್ಯಾರಂಟಿಗಳು ಜನರ ಮನೆ ಮನೆ ತಲುಪಿವೆ. ಗ್ಯಾರಂಟಿಗಳ ಹೊರತಾಗಿ ಅಭಿವೃದ್ಧಿಗೂ ಹಣ ಮೀಸಲಿಟ್ಟು ಖರ್ಚು ಮಾಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಂಕಿ ಅಂಶಗಳ ಸಮೇತ ವಿವರಿಸಿದರು.

ಸರ್ಕಾರಕ್ಕೆ ವರ್ಷ ಪೂರೈಸಿದ ಸಂದರ್ಭದಲ್ಲಿ ಬೆಂಗಳೂರು ಪ್ರೆಸ್ ಕ್ಲಬ್ ಆಯೋಜಿಸಿದ್ದ ಮೀಟ್ ದ ಪ್ರೆಸ್ ನಲ್ಲಿ ಮಾತನಾಡಿದರು.ವಿಜಯೇಂದ್ರ, ಆರ್.ಅಶೋಕ್ ಗೆ ಆರ್ಥಿಕತೆ ಅರ್ಥ ಆಗಲ್ಲ. ಹೀಗಾಗಿ ಖಜಾನೆ ಖಾಲಿ ಆಗಿದೆ ಎಂದು ಪರಮ ಸುಳ್ಳು ಹೇಳುತ್ತಿದ್ದಾರೆ. ನಾವು ಗ್ಯಾರಂಟಿಯೇತರ ಅಭಿವೃದ್ಧಿ ಕಾರ್ಯಗಳಿಗೆ 54374 ಕೋಟಿ ಖರ್ಚು ಮಾಡುವುದಾಗಿ ಬಜೆಟ್ ನಲ್ಲಿ ಹೇಳಿದ್ದೆವು. ಆದರೆ 56274 ಕೋಟಿ ಖರ್ಚು ಮಾಡಿದೆವು. ಅಂದರೆ ಬಜೆಟ್ ನಲ್ಲಿ ಹೇಳಿದ್ದಕ್ಕಿಂತ ಹೆಚ್ಚು ಖರ್ಚು ಮಾಡಿದ್ದೇವೆ. ನೀರಾವರಿಗೆ 16360 ಕೋಟಿ ಖರ್ಚು ಮಾಡುವುದಾಗಿ ಬಜೆಟ್ ನಲ್ಲಿ ಹೇಳಿದ್ದೆವು. ಆದರೆ 18198 ಕೋಟಿ ಖರ್ಚು ಮಾಡಿದೆವು. ಹೇಳಿದ್ದಕ್ಕಿಂತ ಹೆಚ್ಚು ಖರ್ಚು ಮಾಡಿದ್ದೇವೆ ಎಂದರು.

ಲೋಕೋಪಯೋಗಿ ಇಲಾಖೆಗೂ 9661 ಕೋಟಿ ಖರ್ಚು ಮಾಡಿದ್ದೇವೆ. ಬಿಜೆಪಿಯವರ ಹೇಳಿಕೆಯಂತೆ ಖಜಾನೆ ಖಾಲಿ ಆಗಿದ್ದರೆ ಇಷ್ಟೆಲ್ಲಾ ಖರ್ಚು ಮಾಡಲು ಸಾಧ್ಯವಿತ್ತೇ ಎಂದು ಪ್ರಶ್ನಿಸಿದರು.

ಸಮಾಜ ಕಲ್ಯಾಣಕ್ಕಾಗಿ ಪರಿಶಿಷ್ಟ ಜಾತಿ/ವರ್ಗದ ಗುತ್ತಿಗೆದಾರರಿಗೆ ಒಂದು ಕೋಟಿವರೆಗಿನ ಕಾಮಗಾರಿಗೆ ಮೀಸಲಾತಿ, ಹಿಂದುಳಿದವರಿಗೆ ಮೀಸಲಾತಿ ನೀಡಿದೆವು. ಖಅಖಕ/ಖಿಖಕ ಕಾಯ್ದೆ ಮಾಡಿದ್ದು ನಮ್ಮ ಸರ್ಕಾರ. ಮೋದಿ ಭಾಷಣದಲ್ಲಿ ಸುಳ್ಳು ಹೇಳುವುದನ್ನು ಬಿಟ್ಟು ಈ ಕಾಯ್ದೆಯನ್ನು ಬಿಜೆಪಿ ಆಡಳಿತದ ಸರ್ಕಾರಗಳು ಏಕೆ ಜಾರಿ ಮಾಡಿಲ್ಲ ಎನ್ನುವುದಕ್ಕೆ ಉತ್ತರಿಸಲಿ ಎಂದು ಸವಾಲು ಹಾಕಿದರು.




ಹಿಂದುಳಿದವರ ಮೀಸಲಾತಿ ಕಿತ್ತು ಮುಸ್ಲೀಮರಿಗೆ ಕೊಡ್ತಾರೆ ಎಂದು ಮತ್ತೊಂದು ಮೋದಿ ಸುಳ್ಳು ಹೇಳುತ್ತಿದ್ದಾರೆ. ಇದು ಅಪ್ಪಟ ಸುಳ್ಳು.

ಚಿನ್ನಪ್ಪರೆಡ್ಡಿ ಆಯೋಗದ ವರದಿಯಂತೆ 30 ವರ್ಷದಿಂದ ರಾಜ್ಯದಲ್ಲಿ ಮುಸ್ಲಿಂ ಮೀಸಲಾತಿ ಜಾರಿಯಲ್ಲಿದೆ. ಬೊಮ್ಮಾಯಿ ಸರ್ಕಾರ ಕೂಡ ಸುಪ್ರೀಂಕೋರ್ಟ್ ನಲ್ಲಿ ಅಫಿಡವಿಟ್ ಸಲ್ಲಿಸಿ ಮುಸ್ಲೀಮರ ಮೀಸಲಾತಿ ರದ್ದು ಮಾಡುವುದಿಲ್ಲ ಎಂದು ಒಪ್ಪಿಕೊಂಡಿದೆ. ಆದರೂ ಮೋದಿ ಭಾಷಣಗಳಲ್ಲಿ ಸುಳ್ಳು ಹೇಳುತ್ತಾ ತಿರುಗುತ್ತಿದ್ದಾರೆ. ನಾವು ಯಾರ ಮೀಸಲಾತಿಯನ್ನೂ ಕಿತ್ತುಕೊಂಡಿಲ್ಲ. ಹೀಗಾಗಿ ಮೋದಿ ಹೇಳುತ್ತಿರುವುದು ಅಪ್ಪಟ ಸುಳ್ಳು. ಚುನಾವಣೆಗಾಗಿ ಜನರನ್ನು ರೊಚ್ಚಿಗೆಬ್ಬಿಸಿ, ದಿಕ್ಕು ತಪ್ಪಿಸುವುದನ್ನು ಬಿಜೆಪಿ ಮತ್ತು ಮೋದಿ ನಿಲ್ಲಿಸಬೇಕು. ಜನ ಬಿಜೆಪಿಯ ಸುಳ್ಳಿಗಳ ಬಗ್ಗೆ ಎಚ್ಚೆತ್ತುಕೊಂಡಿದ್ದಾರೆ ಎಂದರು.

ಆರೋಗ್ಯ, ಶಿಕ್ಷಣ, ನೀರಾವರಿ, ಸಮಾಜ ಕಲ್ಯಾಣ, ಕೃಷಿ ಸೇರಿ ಎಲ್ಲಾ ಇಲಾಖೆಗಳಲ್ಲೂ ಅಭಿವೃದ್ಧಿ ಕೆಲಸಗಳು ಯಥೇಚ್ಚವಾಗಿ ನಡೆಯುತ್ತಿವೆ ಎಂದು ವಿವರಿಸಿದರು.

ಬಿಜೆಪಿಯ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿ ನರಳುತ್ತಿದ್ದ ಮಧ್ಯಮ ವರ್ಗ ಮತ್ತು ಬಡವರ ಕೊಳ್ಳುವ ಶಕ್ತಿ ಹೆಚ್ಚಿಸಲು ಗ್ಯಾರಂಟಿಗಳನ್ನು ಜಾರಿ ಮಾಡಿದೆವು ಎಂದು ವಿವರಿಸಿದರು.

### ಸಿಎಂ ಮಾತಿನ ಹೈಲೈಟ್ಸ್

ದೇವಸ್ಥಾನಗಳ ಹಣ ಕಿತ್ತುಕೊಳ್ಳುತ್ತಿದ್ದಾರೆ ಎಂದು ಸುಳ್ಳು ಪ್ರಚಾರ ಮಾಡಿದರು. ಆದರೆ ಗ್ರಾಮೀಣ ಭಾಗದ ದೇವಸ್ಥಾನಗಳ ಅಭಿವೃದ್ಧಿಗೆ ನಾವು ಮುಂದಾಗಿದ್ದೇವೆ ಎನ್ನುವ ಸತ್ಯ ಮರೆಮಾಚಿ ಅಪಪ್ರಚಾರ ಮಾಡುತ್ತಿದ್ದಾರೆ

**ಪ್ರಮಾಣವಚನ ಸ್ವೀಕರಿಸಿದ ದಿನದಿಂದಲೇ ಚುನಾವಣೆಯಲ್ಲಿ ಕೊಟ್ಟ ಆಶ್ವಾಸನೆ, ಗ್ಯಾರಂಟಿಗಳ ಜಾರಿಗೆ ಕ್ರಮ ತೆಗೆದುಕೊಂಡು ಐದಕ್ಕೆ ಐದೂ ಜಾರಿ ಮಾಡಿದ್ದೇವೆ**

ಅನ್ನಭಾಗ್ಯ ಯೋಜನೆಗೆ ನಾವು ಹಣ ಕೊಟ್ಟರೂ ಅಕ್ಕಿ ಕೊಡದೆ ಕೇಂದ್ರ ಸರ್ಕಾರ ಸತಾಯಿಸಿತು. ಅಕ್ಕಿ ಸಂಗ್ರಹ ಇದ್ದರೂ ಕೊಡಲಿಲ್ಲ

**ಮಧ್ಯವರ್ತಿಗಳ ಹಾವಳಿ ಇಲ್ಲದಂತೆ ನೇರ ನಾಡಿನ ಜನತೆಯ ಖಾತೆಗೆ ಹಣ ಜಮೆ**

ಚಿನ್ನಪ್ಪರೆಡ್ಡಿ ಆಯೋಗದ ವರದಿಯಂತೆ 30 ವರ್ಷದಿಂದ ರಾಜ್ಯದಲ್ಲಿ ಮುಸ್ಲಿಂ ಮೀಸಲಾತಿ ಜಾರಿಯಲ್ಲಿದೆ. ಬೊಮ್ಮಾಯಿ ಸರ್ಕಾರ ಕೂಡ ಸುಪ್ರೀಂಕೋರ್ಟ್ ನಲ್ಲಿ ಅಫಿಡವಿಟ್ ಸಲ್ಲಿಸಿ ಮುಸ್ಲೀಮರ ಮೀಸಲಾತಿ ರದ್ದು ಮಾಡುವುದಿಲ್ಲ ಎಂದು ಒಪ್ಪಿಕೊಂಡಿದೆ. ಆದರೂ ಮೋದಿ ಭಾಷಣಗಳಲ್ಲಿ ಸುಳ್ಳು ಹೇಳುತ್ತಾ ತಿರುಗುತ್ತಿದ್ದಾರೆ.

**ನಾವು ಯಾರ ಮೀಸಲಾತಿಯನ್ನೂ ಕಿತ್ತುಕೊಂಡಿಲ್ಲ. ಹೀಗಾಗಿ ಮೋದಿ ಹೇಳುತ್ತಿರುವುದು ಅಪ್ಪಟ ಸುಳ್ಳು ಎಂದರು**

ನಮ್ಮ ಕಾಲದಲ್ಲಿ ಭ್ರಷ್ಟಾಚಾರ ಸಂಪೂರ್ಣವಾಗಿ ನಿಂತಿದೆ ಎಂದು ಹೇಳೋದಿಲ್ಲ. ಆದರೆ ಪ್ರಮಾಣ ಕಡಿಮೆ ಮಾಡಲು ನಿಷ್ಠುರವಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. 40% ತನಿಖೆಗೆ ಶುರು ಮಾಡಿಸಿದ್ದೇವೆ.

ಕವಿ ಮನಸು

## ಕಡಲು–ಕಾನನ ನಡುವೆ ಖುಷಿಯಾಗಿರು

ಶಿವನೊಲಿದು ಭೂಮಿಗೆ ಬಂದಾದ ಮೇಲೆ
ಬೆಳಕಾಗಿರುವ ಮನುಜ ಬೆಳಕಾಗಿರು
ಇಳೆಲೋಕ ಬಳಗದಲಿ ಸೊಗಸಾಗಿರು
ನಿಂಬೆಯ ಹಣ್ಣಂತೆತುಂಬಿದ ಬಾಳಲ್ಲಿ
ಕಡಲು–ಕಾನನ ನಡುವೆಖುಷಿಯಾಗಿರು.

ಫಲ ತುಂಬಿ ಬೀಗುವ ಎಲೆ ಹಸಿರ ಮರದಂತೆ
ತೆರೆದ ಬದುಕಲ್ಲಿ ನೀ ವರವಾಗಿ ಬಾಳೋ...
ಇನಿತೆಜೀವನದಲ್ಲಿ ಪ್ರಣತಿ ಬೆಳಕಿನ ಹಾಗೆ
ಕೊಳೆ ತಿಕ್ಕಿ ಮೈತೊಳೆದು ಹಿರಿತನದಿ ಬಾಳು.

ಕ್ಷಣಕ್ಕೊಂದುರೂಪ ಮೈಮಾಟ ನೀಡಿ
ವೇಗದಲಿ ಓಡುತಿದೆ ಆ ಬಿಸಿಲ ಕುದುರೆ
ಸೃಷ್ಟಿಯೇತರಿದಿದೆಅದೃಷ್ಟಕದವ
ಕನಸ್ಸುಜಾರುವ ಮೊದಲೆತೋರಿಸುಜಗವ.

ಮೋಡದ ಮಿಂಚಲ್ಲಿ ಈ ನೆಲದ ಮಣ್ಣಲ್ಲೆ
ನಿನಗಿದೆ ಆ ಬಲ ಮುನ್ನುಗ್ಗು ಈ ಸಲ
ಮೂಡಣದರವಿಯುರಥವೇರಿ ಬರುವನು
ಕಣ್ಣುತೆರೆದು ನೋಡೊಮ್ಮೆ ಸ್ವರ್ಗದಾಕ್ಷಣವು.

–ಜಿ. ಯರಿಸ್ವಾಮಿ, ಸಂಕ್ಲಾಪುರ

## ವಿದೂಷಕ

ಜೀವನದಲ್ಲಿ ನಾವೆಲ್ಲಾ ವಿದೂಷಕರೇ
ಮೇಲೊಬ್ಬ ಇರುವನು ಪ್ರೇಕ್ಷಕನು
ಅವನು ಆಡಿಸಿದಂತೆ ಆಟವಾಡುವ
ವಿದೂಷಕರು ನಾವಲ್ಲವೇನು?!

ನಮ್ಮ ಜೀವನ ಎಂಬ ರಂಗಸ್ಥಳದಲ್ಲಿ
ಎಲ್ಲರಿಗೂ ಒಂದೊಂದು ಪಾತ್ರವ ನೀಡಿ
ಪಾತ್ರಕ್ಕೆ ಬಣ್ಣವ ತುಂಬಿ ವೇಷ
ಹಾಕಿಸುವನು
ಮೇಲಿರುವ ಭಗವಂತನೆಂಬ ವಿದೂಷಕನು!

ಬಾಳಿನ ಕಲ್ಲು ಮುಳ್ಳುಗಳ ಹಾದಿಯಲ್ಲಿ
ಅನೇಕ ಪಾತ್ರಗಳ ನಮಗೆ ಹಾಕಲು ಕೊಟ್ಟು
ಪಾತ್ರಧಾರಿಗಳ ಪಾತ್ರಗಳ ಲೆಕ್ಕಾಚಾರ
ಮಾಡಿ
ಸ್ವರ್ಗ ನರಕವ ಕರುಣಿಸುವನು
ಸೂತ್ರಧಾರನು!

ಬಾಳಿನಲ್ಲಿ ಕಷ್ಟವೇ ಇರಲಿ ಸುಖವೇ ಇರಲಿ
ನಮ್ಮಿಚ್ಛೆಯಂತೆ ಯಾವುದಿಲ್ಲ ಎಂಬುದರಿತು
ನಗುನಗುತಾ ಸಾಗಲೇಬೇಕು ಅವ
ಮೆಚ್ಚುವಂತೆ
ಅವನಾಡಿಸುವ ವಿದೂಷಕರು
ನಾವಲ್ಲವೇನು?!

– **ಪ್ರಜ್ಞಾ ರವೀಶ್,** ಕುಳಮರ್ವ

## ಸ್ಮರಣೆ

ಪ್ರೀತಿಯೇ ಬದುಕಲು ಪ್ರೇರಣೆ
ನಂಬಿಕೆಯೇ ಸಂಬಂಧಗಳಿಗೆ ರಕ್ಷಣೆ
ಇರಲಿ ಬಾಳಿನಲಿ ಸ್ನೇಹ ಕರುಣೆ
ನಮ್ಮ ಬದುಕಿಗೆ ನಾವೇ ಹೊಣೆ

ನಡೆ ನುಡಿಯಲಿರಲಿ ಹಿರಿಯರ ಅನುಕರಣೆ
ಮಾಡದಿರಿ ಅವರ ಅನುಭವದ ನುಡಿಗಳ
ನಿರಾಕರಣೆ
ಆತ್ಮೀಯವಾಗಿ ಆಚರಿಸಿದರೆ ಆಚರಣೆ
ಸಿಗುವುದು ಜೀವನದಲ್ಲಿ ಮನ್ನಣೆ

ಜಪಿಸಿರಿ ಭಗವಂತನ ನಾಮ ಸ್ಮರಣೆ
ಮನದಲಿ ಆಗಲಿ ಶಾಂತಿಯ ಸಂಗ್ರಹಣೆ

–ಚೇತನ ಭಾರ್ಗವ

**ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ, ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ**

ಡಿ.ವಿ.ಜಿ.

# ಇನ್ನಷ್ಟು ಬೇಕಾಗಿವೆ.... ಸಾಮಾಜಿಕ ನೀತಿ ಸಂಹಿತೆಗಳು

ವಿವಿಧ ಸಂಸ್ಕೃತಿಗಳು, ಜಾತಿಗಳು, ಮತಗಳು, ಆಚರಣೆಗಳು ರೂಢಿಯಲ್ಲಿರುವ ಭಾರತ ದೇಶದಲ್ಲಿ ಒಂದು ಅಲಿಖಿತ ಸಾಮಾಜಿಕ ನೀತಿ ಸಂಹಿತೆ ಜಾರಿಯಲ್ಲಿದೆ. ಕೆಲವೊಮ್ಮೆ ಪುರಾತನ ಎಂದೆನ್ನಿಸಿದರೂ ಕೂಡ ನಮ್ಮ ಸಂಸ್ಕೃತಿಯ ಮೂಲ ಬೇರುಗಳನ್ನು ಎತ್ತಿ ಹಿಡಿಯುವ ಮಾನವೀಯ ಪ್ರಜ್ಞೆಯನ್ನು ಒಳಗೊಂಡಿರುವ ಕೆಲ ಸಾಮಾಜಿಕ ನಿಯಮಾವಳಿಗಳು ಇಂದಿಗೂ ನಮ್ಮ ಸಮಾಜದ ಸ್ವಾಸ್ಥ್ಯವನ್ನು ಕಾಯುತ್ತವೆ.

ಇನ್ನೇನು ಕೆಲವೇ ದಿನಗಳಲ್ಲಿ ಚುನಾವಣೆ ಬರುತ್ತದೆ ಎನ್ನುವಾಗ ಜಾರಿಯಾಗುವ ಚುನಾವಣಾ ನೀತಿಸಂಹಿತೆಯಂತೆ ನಮ್ಮ ಸಾಮಾಜಿಕ ನೀತಿ ಸಂಹಿತೆಯು ಕೂಡ ಬದಲಾಗುತ್ತಿರುವ ಸಾಮಾಜಿಕ ಸ್ಥಿತ್ಯಂತರಗಳ ಜೊತೆ ಜೊತೆಗೆ ಪರಿಷ್ಕರಣೆಗೊಳ್ಳುತ್ತಲೇ ಇರಬೇಕು ಮತ್ತು ಕಡ್ಡಾಯವಾಗಿ ಪಾಲಿಸಲೇಬೇಕು ಎಂಬುದು ಪ್ರಸಕ್ತ ಸಾಮಾಜಿಕ ಅವಶ್ಯಕತೆಯನ್ನು ಸೂಚಿಸುತ್ತದೆ.

ಕೇವಲ ಎರಡೇ ದಶಕಗಳಲ್ಲಿ ಇಡೀ ಜಗತ್ತು ಗ್ಲೋಬಲ್ ವಿಲೇಜ್ ಆಗಿ ಮಾರ್ಪಟ್ಟಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಸಹಾಯದಿಂದ ಅಂಗೈಯಲ್ಲಿ ಈ ಬೃಹತ್ ಬ್ರಹ್ಮಾಂಡವನ್ನು ನೋಡಬಹುದಾಗಿದೆ... ಆದರೆ ದೀಪದ ಅಡಿಯಲ್ಲಿಯೇ ಕತ್ತಲೆ ಇರುವಂತೆ ಪ್ರತಿಯೊಂದು ವೈಜ್ಞಾನಿಕ ಆವಿಷ್ಕಾರದ ಹಿಂದೆ ಕೆಲ ಕರಾಳತೆಗಳು ಅಡಗಿವೆ. 21ನೇ ಶತಮಾನದ ಆದಿಯಲ್ಲಿ ಬಂದ ಅಂತರ್ಜಾಲ ಮತ್ತು ಮಾಹಿತಿ ತಂತ್ರಜ್ಞಾನವು ಮಾಹಿತಿಯ ಜೊತೆಜೊತೆಗೆ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಭರಪೂರ ಮನರಂಜನೆಯನ್ನು ಹೊತ್ತು ತಂದಿತು. ಮೊದಮೊದಲು ಮೂರ್ಖರ ಪೆಟ್ಟಿಗೆಯ ಮುಂದೆ ಕುಳಿತು ತರಹೇವಾರಿ ಧಾರಾವಾಹಿಗಳನ್ನು, ಸಿನಿಮಾಗಳನ್ನು ನೋಡುತ್ತಿದ್ದ ಜನರು ಮುಂದಿನ ಒಂದು ದಶಕದಲ್ಲಿ ಮೊಬೈಲ್ ಎಂಬ ಮಾಯಾಂಗನೆಯ ಕೈಯಲ್ಲಿ ಸಿಲುಕಿ ಇದೀಗ ವಾಟ್ಸಪ್, ಇನ್ಸ್ಟಾಗ್ರಾಂ, ಫೇಸ್ಬುಕ್, ಯೂಟ್ಯೂಬ್ ಮತ್ತಿತರ ಮಾಹಿತಿ ಜಾಲಗಳ ಬೆನ್ನತ್ತಿ ಹಿಂತಿರುಗಿ ಬಾರದಷ್ಟು ದೂರ ಸಾಗಿದ್ದಾರೆ. ಕೇವಲ ಒಂದೇ ಚಾನೆಲ್ ಬರುತ್ತಿದ್ದ ಕಾಲದಲ್ಲಿ ಮನೆ ಮಂದಿಯನ್ನೆಲ್ಲ ಒಗ್ಗೂಡಿಸುತ್ತಿದ್ದ ದೂರದರ್ಶನವು ಇದೀಗ ಹಲವಾರು ಚಾನಲ್ ಗಳನ್ನು ಹೊಂದಿದ್ದು ದರ್ಶಕರಿಗೆ ಹಲವಾರು ವಿಷಯ ವೈವಿಧ್ಯಗಳನ್ನು ನೀಡುತ್ತಿರುವುದೇನೋ ನಿಜ... ಆದರೆ ಟಿ ಆರ್ ಪಿ ಯ ಬೆಂಬತ್ತಿರುವ ಟಿವಿ ಚಾನೆಲ್ ಗಳು ಒಳ್ಳೆಯ ನ್ಯೂಸ್ ಕೊಡುವ ಸ್ಕೂಪ್ ಗಿಂತ, ಹೆಚ್ಚಿನ ಟಿ ಆರ್ ಪಿ ದೊರೆಯುವ ಕಾರಣ ಸಮಾಜ ಬಾಹಿರ ಕೃತ್ಯಗಳ ದೃಶ್ಯಾವಳಿಗಳನ್ನು ಹೆಚ್ಚು ಪ್ರಸಾರ ಮಾಡುತ್ತಿದ್ದಾರೆ. ಯಾವ ವಸ್ತು, ವಿಷಯಗಳನ್ನು ನಮ್ಮ ಸಮಾಜ ಮಾತನಾಡಲು ಮಡಿವಂತಿಕೆಯನ್ನು ತೋರುತ್ತಿತ್ತೋ ಅದೇ ವಿಷಯಗಳು ಇಂದು ನಮ್ಮ ನಡುಮನೆಯಲ್ಲಿ ಹಾಡಹಗಲೇ ಬಿತ್ತರಗೊಳ್ಳುತ್ತಿವೆ. ಹಾಗೆಂದು ಅಂದು ಯಾವುದೇ ರೀತಿಯ ಅನೈತಿಕತೆ, ಭ್ರಷ್ಟಾಚಾರ ಇರಲಿಲ್ಲ ಎಂದಲ್ಲ... ಆದರೆ ಅದರ ವ್ಯಾಪಕವಾದ ಬಹಿರಂಗ ಪ್ರಚಾರ ಆಗುತ್ತಿರಲಿಲ್ಲ, ಅಷ್ಟರಮಟ್ಟಿಗೆ ಸಮಾಜದಲ್ಲಿ ಬೇಕು ಮತ್ತು ಬೇಡಗಳ ನಡುವಿನ ಸೂಕ್ಷ್ಮ ಗೆರೆ ಇದ್ದು ಅದನ್ನು ಎಲ್ಲರೂ ಪಾಲಿಸುತ್ತಿದ್ದರು.

ಬದಲಾದ ಈ ಎರಡು ದಶಕಗಳ ಪರಿಣಾಮವಾಗಿ ಇಂದಿನ ಮಕ್ಕಳು ನಮ್ಮ ಭಾರತೀಯ ಸಭ್ಯತೆಯಲ್ಲಿ ಹಾಸು ಹೊಕ್ಕಾಗಿರುವ ಸಂಸ್ಕಾರಗಳನ್ನು ಮರೆತಿದ್ದಾರೆ ಎಂದರೆ ತಪ್ಪಿಲ್ಲ. 12ನೇ ಶತಮಾನದಲ್ಲಿ ನಮ್ಮ ವಚನಕಾರರು ಹೇಳಿರುವ ಗುರು ಹಿರಿಯರಲ್ಲಿ ವಿನಯ ವಿಧೇಯತೆ ಇರಬೇಕು, ಪ್ರೀತಿ ವಿಶ್ವಾಸ ಬದುಕಿನ ಮೂಲ ಮಂತ್ರವಾಗಬೇಕು, ಪರಸ್ತ್ರೀ, ಪರಧನಗಳತ್ತ ಕಣ್ಣೆತ್ತಿಯೂ ನೋಡಬಾರದು ಎಂಬ ನಮ್ಮ ಸಂಸ್ಕೃತಿಯ ಮೂಲ ಬೇರುಗಳು ಅಲುಗಾಡುತ್ತಿವೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಇದೆಲ್ಲಕ್ಕೂ ಕಾರಣ ನಮ್ಮ ವಿಸ್ಮೃತಿ.... ನಮ್ಮ ಮಕ್ಕಳು ನಮ್ಮ ಸಂಸ್ಕೃತಿ ಆಚಾರ ವಿಚಾರ ಮತ್ತು ಮಾನವೀಯ ಸಭ್ಯತೆಗಳನ್ನು ಮರೆತು ಸಾಮಾಜಿಕ ಬದುಕನ್ನು ದೂರವಾಗಿಸಿಕೊಂಡು ಕೂಪ ಮಂಡೂಕವಾಗಿ ಬದುಕುತ್ತಿದ್ದಾರೆ. ಆದರೆ ಅವರ ಅರಿವಿಗೆ ಬಾರದೆ ಇರುವ ಒಂದು ವಿಷಯವಿದೆ... ಮನುಷ್ಯ ಸಮಾಜ ಜೀವಿ. ಯಾರೂ ತಮ್ಮ ಹೆಣವನ್ನು ತಾವೇ ಹೊರಲು ಸಾಧ್ಯವಿಲ್ಲ. ನಮ್ಮ ಬದುಕು ಸುಸೂತ್ರವಾಗಿ ಸಾಗಲು ನಮಗೆ ಸಾಮಾಜಿಕ ಜೀವನ ಅತ್ಯಗತ್ಯ. ಅಂತೆಯೇ ಕೆಲ ಸಮಾಜಿಕ ನಿಯಮಾವಳಿಗಳನ್ನು ಮರುರೂಪಿಸುವ ಅವಶ್ಯಕತೆಯೂ ಇದೆ. ಅಂತಹ ಕೆಲವು **ನಿಯಮಾವಳಿಗಳು ಹೀಗಿವೆ**

- ಒಂದು ಚಿಕ್ಕ ಪೆನ್ನು, ಪುಸ್ತಕ, ಚಾರ್ಜರ್ ನಿಂದ ಹಿಡಿದು ಯಾವುದೇ ವಸ್ತು ಇಲ್ಲವೇ ಹಣವನ್ನು ಬೇರೊಬ್ಬರಿಂದ ಪಡೆದುಕೊಂಡಿದ್ದರೆ ಅವರಿಗೆ ಕೊಡುತ್ತೇನೆ ಎಂದು ವಾಗ್ದಾನ ಮಾಡಿದ ಸಮಯಕ್ಕಿಂತ ಮುಂಚೆಯೇ ಅದನ್ನು ಹಿಂದಿರುಗಿಸಿ.
- ಬೇರೆಯವರು ನಿಮಗೆ ಆತಿಥ್ಯ ನೀಡುವಾಗ ದುಬಾರಿಯಾದ ಆಹಾರವನ್ನು ಆರ್ಡರ್ ಮಾಡಬೇಡಿ.
- ನಿಮ್ಮ ಎದುರಿಗಿರುವ ವ್ಯಕ್ತಿಯನ್ನು ಅವರ ಸಂಬಳ, ಅವರ ಮದುವೆ, ಅವರ ಪ್ರೀತಿ ಪ್ರೇಮದ ಬದುಕಿನ ಕುರಿತು, ಮಕ್ಕಳಾಗಿಲ್ಲವೇ ಎಂದು, ಅವರ ಆಸ್ತಿ ಅಂತಸ್ತುಗಳ ಕುರಿತಾಗಿ ಎಂದೂ ಏನನ್ನು ಕೇಳಬಾರದು. ಅವರಿನ್ನೂ ಮನೆ ಖರೀದಿಸಿಲ್ಲವೇ, ಕಾರು ತೆಗೆದುಕೊಂಡಿಲ್ಲವೇ ಎಂಬ ಕುತೂಹಲದ ಪ್ರಶ್ನೆಗಳು ಖಂಡಿತ ಬೇಡ!
- ಯಾರನ್ನು ಕಡೆಗಣಿಸಬೇಡಿ, ಒಬ್ಬ ವ್ಯಕ್ತಿಯ ಘನತೆ ಆತನ ಜಾತಿ, ಮತ, ಪಂಥ ಮತ್ತು ಸಾಮಾಜಿಕ ಅಂತಸ್ತುಗಳಿಂದ ಬರುವುದಿಲ್ಲ ಬದಲಾಗಿ ನಿಮ್ಮ ಎದುರಿಗಿರುವವರ ಜೊತೆಯಲ್ಲಿ ನೀವು ನಡೆದುಕೊಳ್ಳುವ ರೀತಿಯಲ್ಲಿ ಕಂಡು ಬರುತ್ತದೆ. ಹೆಣ್ಣು ಮಕ್ಕಳನ್ನು ಗೌರವದಿಂದ ಕಾಣಿ.
- ಯಾವುದಾದರೂ ಹೋಟೆಲಿಗೆ ಹೋದರೆ ಅಥವಾ ಒಂದೇ ಗಾಡಿಯನ್ನು ಸ್ನೇಹಿತರ ಜೊತೆ ಹೋಗುವಾಗ ಬಾಡಿಗೆಗೆ ಪಡೆದರೆ ಒಂದೊಮ್ಮೆ ಅವರು ಬಾಡಿಗೆ ಕಟ್ಟಿದರೆ ಮತ್ತೊಮ್ಮೆ ನೀವು ಕಡ್ಡಾಯವಾಗಿ ಕಟ್ಟಲೇಬೇಕು ಎಂಬುದನ್ನು ಮರೆಯಬೇಡಿ.



- ಯಾವಾಗಲೂ ನಿಮ್ಮ ಅಭಿಪ್ರಾಯಕ್ಕೆ ಮನ್ನಣೆ ಸಿಗಬೇಕೆಂಬ ಹಠ ಬೇಡ, ಬೇರೆಯವರ ಅಭಿಪ್ರಾಯಕ್ಕೂ ಬೆಲೆ ಕೊಡಿ. ನಾನು ಮಾತ್ರ ಸರಿ ಎಂಬುದು ಖಂಡಿತವಾಗಿಯೂ ತಪ್ಪು.
- ಇಬ್ಬರೂ ವ್ಯಕ್ತಿಗಳ ನಡುವಣ ಮಾತುಕತೆಯ ಮಧ್ಯದಲ್ಲಿ ಬಾಯಿ, ಮೂಗು ತೂರಿಸಬೇಡಿ. ಮೊದಲು ಅವರನ್ನು ಮಾತನಾಡಲು ಬಿಡಿ ನಂತರ ನಿಮಗೆ ಅವಶ್ಯವಾದುದನ್ನು ಮಾತ್ರವೇ ಆಯ್ದುಕೊಳ್ಳಿ.
- ವಿನಾಕಾರಣ ಯಾರನ್ನು ಹೊಗಳುವುದು ಇಲ್ಲವೇ ತೆಗಳುವುದನ್ನು ಮಾಡಬೇಡಿ. ಸಮಯ ಪ್ರಜ್ಞೆ ತುಂಬಾ ಮುಖ್ಯ. ಅಷ್ಟಾಗಿಯೂ ಅವಶ್ಯಕತೆಯೆನಿಸಿದರೆ ಸಾರ್ವಜನಿಕವಾಗಿ ಹೊಗಳಿ ಮತ್ತು ಖಾಸಗಿಯಾಗಿ ತಿದ್ದಿಕೊಳ್ಳಲು ಹೇಳಿ. ನಿಮಗೆ ಉಪಕಾರ ಮಾಡಿದವರಿಗೆ ಧನ್ಯವಾದಗಳನ್ನು ಸಲ್ಲಿಸಲು ಮರೆಯಬೇಡಿ.
- ಬೇರೆಯವರ ದೇಹದ ಬಣ್ಣ, ಗಾತ್ರ ಮತ್ತು ಮಾತುಗಾರಿಕೆಯ ಕುರಿತು ನಿಮ್ಮ ಅನಿಸಿಕೆಯನ್ನು ಹೇಳಲೇಬೇಡಿ. ಈಗಾಗಲೇ ಜನರಿಂದ ಸಾಕಷ್ಟು ಕಮೆಂಟ್ಗಳನ್ನುಪಡೆದಿರುವಅವರಿಗೆನಿಮ್ಮಮಾತುಗಳಿಂದಬೇಸರವಾಗಬಹುದು. ಬೇರೆಯವರನ್ನು ಮುಜುಗರಗೊಳಿಸುವಂತಹ ಪ್ರಶ್ನೆಗಳನ್ನು ಕೇಳಬೇಡಿ.
- ಒಂದು ಕಂಪನಿಯ ಮುಖ್ಯಸ್ಥನಿಗೆ ಕೊಡುವ ಮರ್ಯಾದೆಯನ್ನು ಆ ಕಂಪನಿಯ ಕಸ ಗುಡಿಸುವ ವ್ಯಕ್ತಿಗೂ ಕೊಡಿ. ದೊಡ್ಡವರನ್ನು ನೀವು ಗೌರವಿಸುವುದನ್ನು ಬೇರೆಯವರು ಗುರುತಿಸುತ್ತಾರೋ ಇಲ್ಲವೋ ಗೊತ್ತಿಲ್ಲ ಆದರೆ ನಿಮಗಿಂತ ಕಡಿಮೆ ಇರುವ ಜನರನ್ನು ನೀವು ನಿಜವಾಗಿಯೂ ಗೌರವಿಸುವುದು ನಿಮ್ಮ ವ್ಯಕ್ತಿತ್ವದ ವೈಶಿಷ್ಟತೆಗೆ ಕಾರಣವಾಗುತ್ತದೆ.
- ಅವರಾಗಿ ಕೇಳದ ಹೊರತು ಯಾರಿಗೂ ಸಲಹೆ ಸೂಚನೆಗಳನ್ನು ಕೊಡಬೇಡಿ. ನಿಮ್ಮನ್ನು ನೀವು ಅವರಾಗಿ ಹೇಳದ ಹೊರತು ಮತ್ತೊಬ್ಬರ ಯಾವುದೇ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಡಿ.
- ಬೆಳಕಿನಲ್ಲಿ ನೀವು ಬೇರೆಯವರೊಂದಿಗೆ ಮಾತನಾಡುವಾಗ ನೀವು ಧರಿಸಿರುವ ತಂಪು ಕನ್ನಡಕವನ್ನು ತೆಗೆದಿಡಿ. ಅದು ನಿಮ್ಮ ಎದುರಿಗಿನವರಿಗೆ ನೀವು ಕೊಡುವ ಗೌರವ. ಅದೂ ಅಲ್ಲದೆ ಸಂವಹನಕ್ಕೆ ಮುಖ್ಯವಾಗಿ ಬೇಕಾಗಿರುವುದು ಪರಸ್ಪರ ಕಣ್ಣೋಟಗಳ ವಿನಿಮಯ.
- ಬೇರೆಯವರ ಮುಂದೆ ನಿಮ್ಮ ಶ್ರೀಮಂತಿಕೆಯನ್ನಾಗಲಿ, ನಿಮ್ಮ ಜಾಣ್ಮೆಯನ್ನಾಗಲಿ ತೋರಗೊಡಬೇಡಿ.
- ಸಮಾಜದಲ್ಲಿ ಗಣ್ಯ ವ್ಯಕ್ತಿಗಳೆನಿಸಿಕೊಂಡಿರುವವರ ಪರಿಚಯ ನಿಮಗಿದೆ ಎಂದು ಅದನ್ನು ಬೇರೆಡೆ ದುರ್ಬಳಕೆ ಮಾಡುವ, ಅವರ ಹೆಸರನ್ನು ಬಳಸಿಕೊಂಡು ನಿಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಖಂಡಿತ ಸಲ್ಲದು.
- ಇನ್ನು ಮೊಬೈಲ್ ಎಂಬ ಮಾಯಾಂಗನೆ ನಮ್ಮೆಲ್ಲರ ಜೀವನದಲ್ಲಿ ಅತಿ ಹೆಚ್ಚಿನ ಖಾಸಗಿತನವನ್ನು ತಂದಿದ್ದಾಳೆ. ಮೊಬೈಲ್ ಬಳಸುವಾಗ ಕೂಡ ನಾವು ಹಲವಾರು ನಿಯಮಾವಳಿಗಳನ್ನು ಹಾಕಿಕೊಳ್ಳಬೇಕು.
- ಅವಶ್ಯಕತೆ ಇಲ್ಲದ ಹೊರತು ಪದೇ ಪದೇ ಯಾರಿಗೂ ಫೋನ್ ಮಾಡಬೇಡಿ. ಎರಡಕ್ಕಿಂತ ಹೆಚ್ಚು ಬಾರಿ ಒಬ್ಬ ವ್ಯಕ್ತಿ ನಿಮ್ಮ ಫೋನ ಕರೆಯನ್ನು ಎತ್ತುವುದಿಲ್ಲ ಎಂದರೆ ಅವರು ನಿಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ ಎನ್ನುವುದಕ್ಕಿಂತ ಅವರು ನಿಮ್ಮ ಕರೆಗಿಂತ ಮುಖ್ಯವಾದ ವಿಷಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರ್ಥ.
- ಯಾರಾದರೂ ತಮ್ಮ ಮೊಬೈಲ್ನಲ್ಲಿ ಯಾವುದಾದರೂ ಫೋಟೋ ಮತ್ತಿತರ ವಿಷಯವನ್ನು ತೋರಿಸುತ್ತಿದ್ದರೆ ಕೇವಲ ಆ ಚಿತ್ರವನ್ನು ಮಾತ್ರ ನೋಡಿ.... ಮೊಬೈಲನ ಪರದೆಯ ಮೇಲೆ ಅತ್ತಿತ್ತ ಕೈ ಆಡಿಸಿ ಬೇರೆ ಚಿತ್ರಗಳನ್ನು ನೋಡುವ ಪ್ರಯತ್ನ ಬೇಡ.
- ಅದಷ್ಟೇ ಸಾಮಾಜಿಕವಾಗಿ ನಾವು ಮುಂದುವರೆದಿದ್ದರೂ ಮತ್ತೊಬ್ಬರಿಗೆ ಅವಶ್ಯಕತೆ ಇಲ್ಲದ ಹೊರತು ಕರೆ ಇಲ್ಲವೇ ಮೆಸೇಜ್ ಮಾಡಬಾರದು ಅದು ರಾತ್ರಿ 10 ರ ನಂತರ ಮತ್ತು ಇಳಿ ಮಧ್ಯಾಹ್ನದ ಸಮಯಗಳಲ್ಲಿ. ನಿಮ್ಮ ಒಂದು ಫೋನ್ ಕರೆ ಇಲ್ಲವೇ ಮೆಸೇಜ್ ಎದುರಿಗಿನ ವ್ಯಕ್ತಿಯ ವೈಯಕ್ತಿಕತೆಗೆ ಧಕ್ಕೆ ತರಬಾರದು. ಮನುಷ್ಯನಲ್ಲಿರುವ ಸೈತಾನಕೆಯ ಗುಣಲಕ್ಷಣಗಳು ಕೆರಳುವುದು ಅಂತಹ ಸಮಯದಲ್ಲಿಯೇ. ವಿರುದ್ಧ ಲಿಂಗಿಗಳ ಜೊತೆ ಮಾತನಾಡುವಾಗಲಂತೂ ನಿಮ್ಮ ಭಾಷೆಯ ಮೇಲೆ ಹಿಡಿತವಿರಲಿ. ಸಂದೇಶದಲ್ಲಿ ನೀವು ಕಳುಹಿಸುವ ಎಮೋಜಿಗಳು ಬೇರೆಯವರಿಗೆ ತಪ್ಪು ಅರ್ಥವನ್ನು ಕಲ್ಪಿಸಿ ಕೊಡಬಾರದು. ನಿಮ್ಮ ಉದ್ದೇಶಗಳು ಒಳ್ಳೆಯವಾಗಿದ್ದರೆ ಸಾಲದು ಅದನ್ನು ಪ್ರತಿಪಾದಿಸುವಂತೆಯೂ ಇರಬೇಕು. (ಇಂದು ಬಹಳಷ್ಟು ಜನರು ತಮ್ಮ ಕೌಟುಂಬಿಕ ನೆಮ್ಮದಿಯನ್ನು ಕಳೆದುಕೊಂಡಿರುವುದು ಇಂತಹ ತಪ್ಪುಗಳಿಂದಲೇ) ಇತ್ತೀಚೆಗಿನ ಮತ್ತೊಂದು ಬೆಳವಣಿಗೆ ಎಂದರೆ ಬೇರೆಯವರು ನಿಮ್ಮೊಂದಿಗೆ ಖಾಸಗಿಯಾಗಿ ಮಾತನಾಡಿದಾಗ ಕಾಲ್ ರೆಕಾರ್ಡ್ ಮಾಡಿಕೊಳ್ಳುವುದು..... ಇದಂತೂ ಅಕ್ಷಮ್ಯ ಅಪರಾಧ. ಕೆಲವು ಬಾರಿ ಇದು ಅನುಕೂಲಕರ ವಾದರೂ ನಮ್ಮೊಂದಿಗೆ ಮಾತನಾಡುತ್ತಿರುವ ವ್ಯಕ್ತಿಯ ಕುರಿತ ನಮ್ಮ ನಂಬಿಕೆಯನ್ನು ಪ್ರಶ್ನಿಸುತ್ತದೆ. ಏನನ್ನೋ ಸಾಬೀತುಪಡಿಸುವ ಹುಚ್ಚಿನಲ್ಲಿ ನಾವು ಬಹಳಷ್ಟನ್ನು ಕಳೆದುಕೊಳ್ಳುತ್ತೇವೆ. ಅತಿಯಾದ ಖಾಸಗಿತನ ತಪ್ಪು ದಾರಿಗೆ ಎಡೆ ಮಾಡಿಕೊಡುತ್ತದೆ, ಅದರಲ್ಲೂ ಕುಟುಂಬದ ಇತರ ಸದಸ್ಯರ ಮುಂದೆಯೂ ಖಾಸಗಿತನ ಇರುವುದು ಪರಸ್ಪರ ಅಪನಂಬಿಕೆಗೆ, ಅನುಮಾನಕ್ಕೆ ಕಾರಣವಾಗುತ್ತದೆ. ಕೊನೆಯವರೆಗೂ ನೀವು ಜೀವಿಸಬೇಕಾಗಿರುವುದು ನಿಮ್ಮವರೊಂದಿಗೆ...

ನಮಗಿರುವುದು ಒಂದೇ ಜೀವನ... ಆ ಜೀವನವನ್ನು ಘನತೆ ಗೌರವದಿಂದ ಬದುಕಿ ಬಾಳಲು ಸಾಮಾಜಿಕ ಅಂಕುಶ ಬೇಕೇ ಬೇಕು. ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಂಡಿರುವ ನಾವುಗಳು ಸಮಾಜದ ಹಂಗು ನಮಗಿಲ್ಲ ಎಂಬಂತೆ ವರ್ತಿಸಲೇ ಬಾರದು. ಈ ಸಮಾಜ ನಮ್ಮನ್ನು ಗುರುತಿಸುವುದು ನಾವು ಇಂಥವರ ಮನೆಯ ಮಕ್ಕಳು, ಸೊಸೆ, ಮೊಮ್ಮಕ್ಕಳು ಎಂಬ ಕೌಟುಂಬಿಕ ಪರಿಚಯದಿಂದಲೇ ಹೊರತು ನಾವು ಗಳಿಸಿರುವ ಓದು ವಿದ್ಯೆ ಐಶ್ವರ್ಯಗಳಿಂದಲ್ಲ.

ಅಂತಿಮವಾಗಿ ಸಾಮಾಜಿಕ ಶಿಶುಗಳು ನಾವು... ಸಾಮಾಜಿಕ ನೀತಿ ನಿಯಮಾವಳಿಗಳನ್ನು ಪಾಲಿಸುತ್ತಾ ನಮ್ಮ ವೈಯಕ್ತಿಕ ಬೆಳವಣಿಗೆಯ ಜೊತೆ ಜೊತೆಗೆ ಉತ್ತಮ ಸಾಮಾಜಿಕ ಬೆಳವಣಿಗೆಗೆ ನಮ್ಮ ಅಳಿಲು ಸೇವೆಯನ್ನು ಸಲ್ಲಿಸೋಣ.






## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**21–05–2024 – ಸೋಮವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಚಿತ್ತ |
| ಯೋಗ | : ವ್ಯತಾಪತ್ರಾ |
| ಕರಣ | : ತೈತುಲ |
| ಸೂರ್ಯೋದಯ | : 05:44:36 |
| ಸೂರ್ಯಾಸ್ತ | : 19:02:46 |
| ರಾಹು | : 14:43–17:23 |
| ಯಮಘಂಡ | : 19:04–10:44 |
| ಗುಳಿಕ | : 12:24–14:03 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 20–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.53 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.388 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1578.93 ಅಡಿ |
| ಒಳ ಹರಿವು | 1093 ಕ್ಯುಸೆಕ್ |
| ಹೊರ ಹರಿವು | 251 ಕ್ಯುಸೆಕ್ |
| ಸಾಮರ್ಥ್ಯ | 3.972 ಟಿಎಂಸಿ |

## ವಾಸವಿ ಜಯಂತಿ ಸಂಭ್ರಮ



**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರಿನಲ್ಲಿ ಆರ್ಯವೈಶ್ಯ ಸಮಾಜದ ಬಂಧುಗಳು ಶುಕ್ರವಾರ ವಾಸವಿ ಜಯಂತಿಯನ್ನು ಸಂಭ್ರಮದೊಂದಿಗೆ ವಿಜೃಂಭಣೆಯಿಂದ ಆಚರಿಸಿದರು.

ವಾಸವಿ ಜಯಂತಿ ಪ್ರಯುಕ್ತ ಪಟ್ಟಣದ ಶ್ರೀ ಕನ್ನಿಕಪರಮೇಶ್ವರಿ ದೇವಸ್ಥಾನದಲ್ಲಿ ಇಲ್ಲಿನ ಆರ್ಯ ವೈಶ್ಯ ಸಮಾಜದ ಮಹಿಳೆಯರು – ಪುರುಷರು ಪಾಲ್ಗೊಂಡು ಶ್ರೀ ಕನ್ನಿಕಪರಮೇಶ್ವರಿಗೆ ಕ್ಷೀರ ಅಭಿಷೇಕ ನೆರವೇರಿಸಿ ಶ್ರೀ ವೆಂಕಟೇಶ್ವರ ಸ್ವಾಮಿ ಹಾಗೂ ಲಕ್ಷ್ಮೀ ನಾರಾಯಣ ಸ್ವಾಮಿಗೆ ವಿಶೇಷ ಪೂಜಾ ಅಲಂಕಾರ ಮಾಡಲಾಗಿತ್ತು, ಶ್ರೀ ವಿಘ್ನೇಶ್ವರನಿಗೆ ವಿಶೇಷ ಅಲಂಕಾರ ಮತ್ತು ಶಾಸ್ತ್ರೋಕ್ತವಾಗಿ ಧಾರ್ಮಿಕ ಕೈಂಕಾರ್ಯಗಳನ್ನು ನೆರವೇರಿಸಿದರು.

ಶ್ರೀ ವಾಸವಿ ದೇವಿ ಉತ್ಸವವನ್ನು ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಿಂದ ಮಂಗಳ ವಾದ್ಯಗಳ ಮೆರವಣಿಗೆಯೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿದರು.

ಶ್ರೀ ವಾಸವಿ ಜಯಂತಿ ಉತ್ಸವದಲ್ಲಿ ಆರ್ಯ ವೈಶ್ಯ ಸಮಾಜದ ಸ್ತ್ರೀಯರು, ಪುರುಷರು ಹಾಗೂ ಮಕ್ಕಳು ಸೇರಿದಂತೆ ನೂರಾರು ಜನರು ಸಂಭ್ರಮ ಸಡಗರದಿಂದ ಪಾಲ್ಗೊಂಡಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಕಾಂಗ್ರೆಸ್‌ನಲ್ಲಿ ಸಂತಸ ಮಾಯ

## ವಿಧಾನ ಪರಿಷತ್ ಸದಸ್ಯ, ಕ್ಷೇತ್ರದ ಚುನಾವಣಾ ಉಸ್ತುವಾರಿ ಎನ್. ರವಿಕುಮಾರ್ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಒಂದು ವರ್ಷವಾಗಿದೆ. ಆದರೆ ಕಾಂಗ್ರೆಸ್ ನ ಅನೇಕರಲ್ಲಿ ಈ ಬಗ್ಗೆ ಸಂತಸ ಕಾಣುತ್ತಿಲ್ಲ. ಬದಲಾಗಿ ಅನೇಕ ಹಿರಿಯ ಕಾಂಗ್ರೆಸಿಗರಲ್ಲಿ ಅಸಮಾಧಾನ ಇದೆ. ಈ ಸರ್ಕಾರವನ್ನು ಗ್ಯಾರಂಟಿ ಮಾತ್ರ ಕೈ ಹಿಡಿದಿದೆ. ಆದರೆ ಜನರಿಗೆ ಮಾತ್ರ ಸರ್ಕಾರದಿಂದ ಯಾವ ಗ್ಯಾರಂಟಿ ಸಹ ಸಿಕ್ಕಿಲ್ಲ ಎಂದು ವಿಧಾನ ಪರಿಷತ್ ಸದಸ್ಯ, ಕ್ಷೇತ್ರದ ಚುನಾವಣಾ ಉಸ್ತುವಾರಿ ಎನ್. ರವಿಕುಮಾರ್ ಹೇಳಿದರು.

ಈಶಾನ್ಯ ಪದವೀಧರ ಕ್ಷೇತ್ರದ ಚುನಟವಣೆ ನಿಮಿತ್ತ ವಿಜಯನಗರ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಸೋಮವಾರ ಪಕ್ಷದ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಲೋಕಸಭಾ ಚುನಾವಣೆ ವೇಳೆ ಗ್ಯಾರಂಟಿ ಹೆಸರಿನಲ್ಲಿ ಮಹಿಳೆಯರಿಗೆ ಒಂದೇ ಸಲಕ್ಕೆ 6 ಸಾವಿರ ರೂಪಾಯಿ ಹಾಕಿದ್ದಾರೆ. ಆಗಲೂ ಕಾಂಗ್ರೆಸ್ ಗೆ ಮತ ಬೀಳುವುದಿಲ್ಲ ಎನ್ನುವ ಕಾರಣಕ್ಕೆ ಪ್ರತಿ ಮತಕ್ಕೆ ಹಣ ನೀಡಿ ಆಮಿಷ ಒಡ್ಡಿದ್ದಾರೆ. ಕೆಲ ಕ್ಷೇತ್ರದಲ್ಲಿ 300 ಕೋಟಿ ಹಣ ಖರ್ಚು ಮಾಡಿರುವ ಮಾಹಿತಿ ನಮಗಿದೆ. ಇಷ್ಟಾದರೂ ಸಹ ಕಾಂಗ್ರೆಸ್ ಗಿಂತ ಬಿಜೆಪಿಯೇ ಅತಿಹೆಚ್ಚು ಕ್ಷೇತ್ರದಲ್ಲಿ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಯಾವುದೇ ಕಾರಣಕ್ಕೂ ಕಾಂಗ್ರೆಸ್ ಗೆ ಮತ ಹಾಕದಂತೆ ನೋಡಿಕೊಂಡು ಬಿಜೆಪಿ ಅಭ್ಯರ್ಥಿ ಅಮರನಾಥ ಪಾಟೀಲ್ ಅವರನ್ನು ಗೆಲ್ಲಿಸುವ ಕೆಲಸ ಮಾಡೋಣ ಎಂದು ಕೋರಿದರು.



ಪದವೀಧರ ಕ್ಷೇತ್ರದ ಅಭ್ಯರ್ಥಿ ಅಮರನಾಥ ಪಾಟೀಲ್ ಮಾತನಾಡಿ, ಒಂದು ಕಾಲದಲ್ಲಿ ಬಿಜೆಪಿಗೆ ಅಧಿಕಾರ ಎನ್ನುವುದು ಕನಸಾಗಿತ್ತು. ಆ ಸಮಯದಲ್ಲೇ ಎಂ.ಆರ್. ತಂಗಾ ಅವರನ್ನು ಪದವೀಧರ ಕ್ಷೇತ್ರದ ವಿಪ ಸದಸ್ಯರನ್ನಾಗಿ ಆಯ್ಕೆ ಮಾಡಿದ ಕೀರ್ತಿ ಈ ಕ್ಷೇತ್ರಕ್ಕೆ ಸಲ್ಲುತ್ತದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ನಿರ್ವಹಣಾ ತಂಡ ರಚಿಸಲಾಗಿತ್ತು. ಇಡೀ ಕ್ಷೇತ್ರದಲ್ಲಿ ಪಕ್ಷದ ಪರವಾಗಿ ಉತ್ತಮ ಕಾರ್ಯ ನಡೆಸಿ ಅಭ್ಯರ್ಥಿಗೆ ಹೆಚ್ಚು ಮತ ದೊರಕುವಂತೆ ಮಾಡಿದ್ದಾರೆ. ಮೂರು ತಿಂಗಳುಗಳ ನಿರಂತರವಾಗಿ ಪಕ್ಷದ ಎಲ್ಲಾ ಪದಾಧಿಕಾರಿಗಳು, ಕಾರ್ಯಕರ್ತರು ಪ್ರತಿ ಮನೆ ಹಾಗೂ ಮತದಾರನ್ನು ತಲುಪಿ ಕೇಂದ್ರ ಸರ್ಕಾರದಿಂದ ಕೈಗೊಂಡ ಅಭಿವೃದ್ಧಿ ಕಾರ್ಯಗಳು, ಸಾಧನೆಗಳ ಮನವರಿಕೆ ಮಾಡಿ ಕೊಡಲಾಯಿತು. ಆ ಮೂಲಕ ಪಕ್ಷ ಗೆಲ್ಲುವಂತೆ ಮಾಡುವಲ್ಲಿ ಕೆಲಸ ನಿರ್ವಹಿಸಿದ್ದೇವೆ. ಫಲಿತಾಂಶದಲ್ಲಿ ನಮ್ಮ ಪಕ್ಷ ಗೆಲ್ಲುವುದು ನಿಶ್ಚಿತ ಎಂದು ವಿಶ್ವಾಸವ್ಯಕ್ತಪಡಿಸಿದರು.

ಮೋದಿಯವರ ಅಲೆ ಇರುವ ಕಾರಣ ಉತ್ತಮ ಮತದಾನವಾಗಿದೆ. ಈ ಬಾರಿಯೂ ಗೆಲುವು ಬಿಜೆಪಿಯದ್ದೇ ಎಂದು ಹೇಳಿದರು. ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ ನಿಮಿತ್ತ ನಮ್ಮ ಅಭ್ಯರ್ಥಿ ಅಮರನಾಥ ಪಾಟೀಲ್ ಅವರನ್ನು ಗೆಲ್ಲಿಸಿ ವಿಧಾನ ಪರಿಷತ್ ಗೆ ಕಳುಹಿಸುವ ಮಹತ್ತರ ಜವಾಬ್ದಾರಿ ಇದೆ. ಜಿಲ್ಲೆಯ ಎಲ್ಲಾ ತಾಲೂಕುಗಳಿಗೆ ತಂಡಗಳಾಗಿ ತೆರಳಿ ಅಭ್ಯರ್ಥಿಗೆ ಪ್ರಥಮ ಪ್ರಾಶಸ್ತ್ಯದ ಮತ ಹಾಕಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗೋಣ ಎಂದು ಮನವಿ ಮಾಡಿದರು.

ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ. ಶ್ರೀರಾಮುಲು ಮಾತನಾಡಿದರು. ಸಭೆಯಲ್ಲಿ ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ರಾಜ್ಯ ಒಬಿಸಿ ಉಪಾಧ್ಯಕ್ಷ ಅಯ್ಯಾಳಿ ತಿಮ್ಮಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ವಿಭಾಗ ಸಂಘಟನಾ ಕಾರ್ಯದರ್ಶಿ ಎಚ್. ಪೂಜಪ್ಪ, ಬಳ್ಳಾರಿ ವಿಭಾಗ ಸಹ ಪ್ರಭಾರಿ ಚಂದ್ರಶೇಖರ ಪಾಟೀಲ ಹಲಗೇರಿ, ಚುನಾವಣಾ ಸಂಚಾಲಕ ಓದೋಗಂಗಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಜೀವರೆಡ್ಡಿ, ಬಲ್ಲಾಹುಣ್ಸಿ ರಾಮಣ್ಣ, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಕಿಚಿಡಿ ಕೊಟ್ರೇಶ್, ಮುಖಂಡ ಕೆ.ಎಲ್. ಮಹೇಶ್ವರಸ್ವಾಮಿ, ಸಿದ್ಧಾರ್ಥ ಸಿಂಗ್, ಜಿಲ್ಲಾ ಮಾಧ್ಯಮ ಸಂಚಾಲಕ ಬಸವರಾಜ ಕರ್ಕಿಹಳ್ಳಿ, ಸಹ ಸಂಚಾಲಕ ಬಿ. ಶಂಕರ್, ಮಂಡಲ ಅಧ್ಯಕ್ಷ ಶಂಕರ್ ಮೇಟಿ, ಸಾಲಿ ಸಿದ್ದಯ್ಯಸ್ವಾಮಿ, ಶಿವಶಂಕರ್ ಸೇರಿದಂತೆ ವಿವಿಧ ಮೋರ್ಚಾಗಳ ಜಿಲ್ಲಾಧ್ಯಕ್ಷರು, ಜಿಲ್ಲಾ ಮತ್ತು ಮಂಡಲಗಳ ಪದಾಧಿಕಾರಿಗಳು ಹಾಜರಿದ್ದರು.

# ಖಾಸಗಿ ವ್ಯಕ್ತಿಯ ಹಿಡಿತದಿಂದ ಕೆರೆಯನ್ನು ಮುಕ್ತಗೊಳಿಸಿ

## ಸಾರ್ವಜನಿಕ ಬಳಕೆಗೆ ಕೆರೆಯಲ್ಲಿ ಗೋಶಾಲೆ ನಿರ್ಮಿಸಲು ಆಗ್ರಹ

**ಹಂಪಿ ಟೈಮ್ಸ್ ಕೂಡ್ಲಿಗಿ:**

ರೈತರಿಗೆ ಸಮರ್ಪಕವಾಗಿ ಬೀಜ ಮತ್ತು ಗೊಬ್ಬರ ವಿತರಣೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ಕಿಸಾನ್ ಸಭಾ ಹಾಗೂ ಸಿಪಿಐ ಪಕ್ಷದ ಕಾರ್ಯಕರ್ತರು ಸೋಮವಾರ ತಹಸೀಲ್ದಾರ್, ತಾಪಂ ಇಒ ಹಾಗೂ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಪ್ರತ್ಯೇಕ ಮನವಿ ಪತ್ರ ಸಲ್ಲಿಸಿದರು.

ಎಐಕೆಎಸ್ ರಾಜ್ಯ ಉಪಾಧ್ಯಕ್ಷ ಎಚ್. ವೀರಣ್ಣ ಮಾತನಾಡಿ, ತಾಲೂಕಿನಲ್ಲಿ ಈಗಾಗಲೇ ಮುಂಗಾರು ಮಳೆ ಆರಂಭವಾಗಿದ್ದು, ರೈತರಿಗೆ ತೊಂದರೆಯಾಗದಂತೆ ಬೀಜ, ಗೊಬ್ಬರ ವಿತರಣೆ ಮಾಡಲು ಮುಂಜಾಗ್ರತೆವಹಿಸಬೇಕು. ರಸ ಗೊಬ್ಬರ ಹಾಗೂ ಬೀಜವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದನ್ನು ತಡೆಗಟ್ಟಬೇಕು. ಮಧ್ಯವರ್ತಿಗಳ ಹಾವಳಿ ಇಲ್ಲದೆ ಕೃಷಿ ಯಂತ್ರೋಪಕರಣಗಳನ್ನು ನೇರವಾಗಿ ರೈತ ಫಲಾನುಭವಿಗಳಿಗೆ ನೀಡಬೇಕು ಎಂದು ಆಗ್ರಹಿಸಿದರು.

ತಾಲೂಕಿನ ಪೂಜರಹಳ್ಳಿ ಕೆರೆಯನ್ನು ಖಾಸಗಿ ವ್ಯಕ್ತಿಯೊಬ್ಬರು ಸಾಗುವಳಿ ಮಾಡುತ್ತಿರುವುದನ್ನು ನಿಲ್ಲಿಸಿ, ಕೆರೆಯನ್ನು ಸಾರ್ವಜನಿಕ ಕೆರೆಯನ್ನಾಗಿ ಮಾಡಬೇಕು ಹಾಗೂ ಕೆರೆಯಲ್ಲಿ ಗೋಶಾಲೆಯನ್ನು ಸ್ಥಾಪನೆ ಮಾಡಬೇಕು ಎಂದು ತಹಸೀಲ್ದಾರರಿಗೆ ಒತ್ತಾಯಿಸಿದರು.




ಜಲ ಜೀವನ್ ಮಿಷನ್ ಯೋಜನೆಯಲ್ಲಿ ಹಳ್ಳಿಗಳಲ್ಲಿ ಕಾಮಗಾರಿ ಪೂರ್ಣಗೊಳಿಸದೇ ಹಾಗೂ ಕಳಪೆ ಕಾಮಗಾರಿಯನ್ನು ಮಾಡಿದವರ ಮೇಲೆ ಕ್ರಮ ಕೈಗೊಳ್ಳಬೇಕು. ಗ್ರಾಮಗಳಲ್ಲಿ ಬೇಕಾ ಬಿಟ್ಟಿಯಾಗಿ ಕಾಮಗಾರಿಗೆ ಮಾಡಲಾ ಗಿದ್ದು, ಪೈಪ್ ಲೈನ್ ಅಳವಡಿಸಲು ತೋಡಿದ ಗುಂಡಿಗಳನ್ನು ಸರಿಯಾಗಿ ಮುಚ್ಚಲಾಗಿಲ್ಲ. ಇದರಿಂದ ಜನರು ಓಡಾಡುವುದೇ ದುಸ್ಥರವಾಗಿದೆ. ಕೆಲವು ಗ್ರಾಮಗಳಲ್ಲಿ ಕಾಮಗಾರಿ ನಡೆಯದೆ ಇದ್ದರು ಅನುದಾನ ಬಿಡುಗಡೆ ಯಾಗಿದೆ. ಈ ಬಗ್ಗೆ ತನಿಖೆ ನಡೆಸಿ ತಪ್ಪಿಸ್ಥರ ವಿರುದ್ದ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ತಹಸೀಲ್ದಾರ್ ರಾಜು ಪಿರಂಗಿ, ತಾಪಂ ಇಒ ವೈ. ರವಿಕುಮಾರ್, ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕ ಸುನಿಲ್ ಕುಮಾರ್, ಸಹಾಯಕ ಕೃಷಿ ಅಧಿಕಾರಿ ನೀಲಾ ನಾಯ್ಕ್ ಮನವಿ ಸ್ವೀಕಾರ ಮಾಡಿದರು.

ಎಐಕೆಎಸ್ ಜಿಲ್ಲಾಧ್ಯಕ್ಷ ಗುಡಿಹಳ್ಳಿ ಹಾಲೇಶ್, ಕಟ್ಟಡ ಕಾರ್ಮಿಕರ ಸಂಘ ಅಧ್ಯಕ್ಷ ಯು. ಪೆನ್ನಪ್ಪ ಸಿಪಿಐ ತಾಲೂಕು ಕಾರ್ಯದರ್ಶಿ ಕರಿಯಪ್ಪ, ವೈ. ಮಲ್ಲಿಕಾರ್ಜುನ, ಸಿದ್ದಲಿಂಗ ಸ್ವಾಮಿ, ಟ್ಯಾಂಕಿ ತಿಪ್ಪೇಸ್ವಾಮಿ, ಬಸಣ್ಣ, ಹುಲಕುಂಟಿ ಗೆದ್ದಯ್ಯ, ಬೋರಣ್ಣ, ಅಂಜಿನಿ, ಬಾಲರಾಜ ಇದ್ದರು.

# ಬೈಕ್ ಡಿಕ್ಕಿ, ನರ್ಸಿಂಗ್ ವಿದ್ಯಾರ್ಥಿನಿ ಸಾವು

**ಹಂಪಿ ಟೈಮ್ಸ್ ಕೂಡ್ಲಿಗಿ:**

ಬೈಕ್ ಹಿಂಬದಿಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಬೈಕಿನಲ್ಲಿದ್ದ ಯುವತಿ ಮೃತಪಟ್ಟು, ಬೈಕ್ ಸವಾರ ಗಾಯಗೊಂಡ ಘಟನೆ ತಾಲೂಕಿನ ಶಿವಪುರ ಬಳಿ ರಾಷ್ಟ್ರೀಯ ಹೆದ್ದಾರಿ–50ರಲ್ಲಿ ಸೋಮವಾರ ನಡೆದಿದೆ.


ಟಿ.ಮೇಘನ(19) ಮೃತಪಟ್ಟ ಯುವತಿಯಾಗಿದ್ದು, ಆಕಾಶ (21) ಗಾಯಗೊಂಡ ಬೈಕ್ ಸವಾರ. ಮೇಘನಾ ಹಾಗೂ ಆಕಾಶ ಹೊಸಪೇಟೆ ಕಡೆಯಿಂದ ಬೈಕಿನಲ್ಲಿ ಬರುತ್ತಿದ್ದಾಗ ಹಿಂಬದಿಯಿಂದ ಬಂದ ಲಾರಿ ಬೈಕಿಗೆ ಡಿಕ್ಕಿಯಾಗಿದೆ. ಇದರಿಂದ ಬೈಕ್ ನಿಯಂತ್ರಣ ತಪ್ಪಿ ಅಕಾಶ್ ಹಾಗೂ ಮೇಘನ ಕೆಳಕ್ಕೆ ಬಿದ್ದಿದ್ದಾರೆ. ನಂತರ ಮೇಘನ ಮೇಲೆ ಲಾರಿ ಹರಿದು ಸ್ಥಳದಲ್ಲೇ ಮೃತ ಪಟ್ಟಿದ್ದಾಳೆ. ಗಾಯಗೊಂಡಿರುವ ಬೈಕ್ ಚಾಲಕ ಆಕಾಶ್ ಬಳ್ಳಾರಿ ವಿಮ್ಸ್ ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೂಡ್ಲಿಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಕಾಶ್ ತಾಲೂಕಿನ ಅಯ್ಯಗಳ ಮಲ್ಲಾಪುರ ಗ್ರಾಮದವನಾಗಿದ್ದು, ಮೇಘನ ಮೀನಕೆರೆ ಗ್ರಾಮದವರು. ಇಬ್ಬರು ಪಟ್ಟಣದ ಕಾಲೇಜೊಂದರಲ್ಲಿ ನರ್ಸಿಂಗ್ ಓದುತ್ತಿದ್ದರು ಎಂದು ತಿಳಿದು ಬಂದಿದೆ. ಡಿಕ್ಕಿ ಹೊಡೆದು ಪರಾರಿಯಾಗಿದ್ದ ಲಾರಿಯನ್ನು ವಶಕ್ಕೆ ಪಡೆದ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ವಿಜ್ಞಾನ

# ಭೂಮಿಯ ಮೇಲಿನ ನೀರು, ವಸ್ತುಗಳು ಬಾಹ್ಯಾಕಾಶದಲ್ಲಿ ಯಾಕೆ ಬೀಳುವುದಿಲ್ಲ?

**ಆರ್.ಬಿ.ಗುರುಬಸವರಾಜ**

"ಸರ್ ಭೂಮಿ ದುಂಡಗಿದೆ ಮತ್ತು ವೇಗವಾಗಿ ಸುತ್ತುತ್ತದೆ ಎಂದು ಹೇಳುತ್ತೀರಿ. ಆದರೆ ಭೂಮಿಯ ಮೇಲಿನ ನೀರು ಮತ್ತು ಇನ್ನಿತರೇ ವಸ್ತುಗಳು ಏಕೆ ಬಾಹ್ಯಾಕಾಶದಲ್ಲಿ ಬೀಳುವುದಿಲ್ಲ" ಎಂದು ರಚನ ತರಗತಿ ಶಿಕ್ಷಕರನ್ನು ಕೇಳಿದಳು. ಅದಕ್ಕೆ ಶಿಕ್ಷಕರು ಹೀಗೆ ಹೇಳಿದರು. ಭೂಮಿಯು ದುಂಡಾಗಿದ್ದು, ಅದು ತನ್ನ ಅಕ್ಷದಲ್ಲೆ ಸುತ್ತುತ್ತದೆ ಎಂದು ಹೇಳುತ್ತೇವೆ. ಭೂಮಿಯು ತನ್ನ ಅಕ್ಷದಲ್ಲಿ ಗಂಟೆಗೆ 1600 ಕಿ.ಮೀ ವೇಗದಲ್ಲಿ ಸುತ್ತುತ್ತದೆ ಎಂಬುದು ನಮಗೆ ತಿಳಿದಿದೆ. ಇಷ್ಟೊಂದು ವೇಗದಲ್ಲಿ ಭೂಮಿ ಸುತ್ತುವಾಗ ಅದರ ಮೇಲ್ಮೈಯಲ್ಲಿನ ಮಾನವರು ಸೇರಿದಂತೆ ನೀರು ಮತ್ತು ವಸ್ತುಗಳು ಬಾಹ್ಯಾಕಾಶದಲ್ಲಿ ಯಾಕೆ ಬೀಳುವುದಿಲ್ಲ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ.



ಭೂಮಿಯ ಗುರುತ್ವಾಕರ್ಷಣೆಯ ಬಲ ದಿಂದಾಗಿ ಭೂಮಿಯ ಮೇಲಿನ ನೀರು ಮತ್ತು ಇತರ ವಸ್ತುಗಳು ಬಾಹ್ಯಾಕಾಶಕ್ಕೆ ಬೀಳುವುದಿಲ್ಲ. ಗುರುತ್ವಾಕರ್ಷಣೆಯು ಭೂಮಿಯ ಮಧ್ಯಭಾಗದ ಕಡೆಗೆ ವಸ್ತುಗಳನ್ನು ಎಳೆಯುವ ಶಕ್ತಿಯಾಗಿದ್ದು, ಅದು ಗ್ರಹದಲ್ಲಿರುವ ಎಲ್ಲವನ್ನೂ ಸ್ವಸ್ಥಳದಲ್ಲಿ ಇರಿಸುತ್ತದೆ. ಭೂಮಿಯ ಗುರುತ್ವಾಕರ್ಷಣೆಯು ವಾತಾವರಣ, ನೀರು ಮತ್ತು ಇತರ ವಸ್ತುಗಳನ್ನು ಗ್ರಹದ ಮೇಲ್ಮೈಯಲ್ಲಿ ಇರಿಸಲು ಸಾಕಷ್ಟು ಪ್ರಬಲವಾಗಿದೆ. ಗುರುತ್ವಾಕರ್ಷಣೆಯು ದ್ರವ್ಯರಾಶಿಯೊಂದಿಗೆ ಯಾವುದೇ ಎರಡು ವಸ್ತುಗಳ ನಡುವೆ ಇರುವ ಪ್ರಕೃತಿಯ ಮೂಲಭೂತ ಶಕ್ತಿಯಾಗಿದೆ. ವಸ್ತುವಿನ ದ್ರವ್ಯರಾಶಿ ಹೆಚ್ಚಾದಷ್ಟೂ ಅದರ ಗುರುತ್ವಾಕರ್ಷಣೆ ಬಲಗೊಳ್ಳುತ್ತದೆ. ಗುರುತ್ವಾಕರ್ಷಣೆಯು ವಸ್ತುವಿನ ದ್ರವ್ಯರಾಶಿಗೆ ಅನುಪಾತದಲ್ಲಿರುತ್ತದೆ. ಭೂಮಿಯ ದ್ರವ್ಯರಾಶಿಯು ತುಂಬಾ ದೊಡ್ಡದಾಗಿದೆ, ಇದು ಗ್ರಹದ ಸುತ್ತಲೂ ಬಲವಾದ ಗುರುತ್ವಾಕರ್ಷಣೆಯ ಕ್ಷೇತ್ರವನ್ನು ಸೃಷ್ಟಿಸುತ್ತದೆ. ಈ ಬಲವು ವಾತಾವರಣ ಮತ್ತು ನೀರನ್ನು ಸ್ಥಳದಲ್ಲಿ ಹಿಡಿದಿಟ್ಟುಕೊಳ್ಳುವಷ್ಟು ಪ್ರಬಲವಾಗಿದೆ ಮತ್ತು ಅವುಗಳನ್ನು ಬಾಹ್ಯಾಕಾಶಕ್ಕೆ ತಪ್ಪಿಸಿಕೊಳ್ಳದಂತೆ ತಡೆಯುತ್ತದೆ.

ಬ್ರಹ್ಮಾಂಡದ ಪ್ರತಿಯೊಂದು ವಸ್ತುವು ಅದರ ಸುತ್ತಲಿನ ಇತರ ವಸ್ತುಗಳ ಮೇಲೆ ಗುರುತ್ವಾಕರ್ಷಣೆಯ ಬಲವನ್ನು ಬೀರುತ್ತದೆ ಮತ್ತು ಆ ಶಕ್ತಿಯ ಬಲವು ವಸ್ತುಗಳ ದ್ರವ್ಯರಾಶಿ ಮತ್ತು ಅವುಗಳ ನಡುವಿನ ಅಂತರವನ್ನು ಅವಲಂಬಿಸಿರುತ್ತದೆ. ಭೂಮಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಅದರ ದೊಡ್ಡ ದ್ರವ್ಯರಾಶಿಯು ಬಲವಾದ ಗುರುತ್ವಾಕರ್ಷಣೆಯ ಕ್ಷೇತ್ರವನ್ನು ಉತ್ಪಾದಿಸುತ್ತದೆ. ಅದು ತನ್ನ ಕೇಂದ್ರದ ಕಡೆಗೆ ಎಲ್ಲಾ ವಸ್ತುಗಳನ್ನು ಆಕರ್ಷಿಸುತ್ತದೆ. ಈ ಗುರುತ್ವಾಕರ್ಷಣೆಯ ಬಲವು ನೀರು, ಕಲ್ಲುಗಳು, ಕಟ್ಟಡಗಳು ಮತ್ತು ಭೂಮಿಯ ಮೇಲ್ಮೈಯಲ್ಲಿರುವ ಎಲ್ಲವನ್ನೂ ಬಾಹ್ಯಾಕಾಶಕ್ಕೆ ಬೀಳದಂತೆ ಮಾಡುತ್ತದೆ. ಒಂದು ವಸ್ತುವು ಭೂಮಿಯ ಗುರುತ್ವಾಕರ್ಷಣೆಯ ಕ್ಷೇತ್ರದೊಳಗೆ ಇರುವವರೆಗೆ, ಅದು ಗ್ರಹದ ಕೇಂದ್ರದ ಕಡೆಗೆ ಆಕರ್ಷಿಸಲ್ಪಡುತ್ತದೆಯೇ ಹೊರತು ವಿರುದ್ದವಾಗಿ ಚಲಿಸುವುದಿಲ್ಲ.

14 ಭಾಷೆ
ಈಗ ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA